ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಮಂಗಳವಾರ, ಡಿಸೆಂಬರ್ 12, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 210 RNI : 27369/75

janathavani@mac.com
www.janathavani.com
☎ 08192 254736 91642 99999

# 370ನೇ ವಿಧಿಗೆ ಅಂತಿಮ ತೆರೆ

## ಜಮ್ಮು-ಕಾಶ್ಮೀರ ವಿಶೇಷ ಸ್ಥಾನಮಾನ ರದ್ಧತಿಗೆ ಸುಪ್ರೀಂ ಕೋರ್ಟ್ ಸಹಮತ

ನವದೆಹಲಿ, ಡಿ. 11- ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿ ರದ್ದುಗೊಳಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠ ಸರ್ವ ಸಮ್ಮತಿಯಿಂದ ಎತ್ತಿ ಹಿಡಿದಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಶೀಘ್ರದಲ್ಲೇ ರಾಜ್ಯದ ಸ್ಥಾನ ನೀಡಬೇಕು ಹಾಗೂ ಮುಂದಿನ ವರ್ಷ ಸೆಪ್ಟೆಂಬರ್ 30ರ ಒಳಗೆ ಚುನಾವಣೆ ನಡೆಸಬೇಕು ಎಂದೂ ಸುಪ್ರೀಂ ಕೋರ್ಟ್ ತಿಳಿಸಿದೆ.

ದಶಕಗಳ ಕಾಲದಿಂದ ಸಂವಿಧಾನದ 370ನೇ ವಿಧಿ ಕುರಿತ ಚರ್ಚೆಗೆ ಅಂತಿಮ ತೆರೆ ಎಳೆದಿರುವ ಸುಪ್ರೀಂ ಕೋರ್ಟ್, 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ ಕ್ರಮವನ್ನು ಎತ್ತಿ ಹಿಡಿದಿದೆ.

ಸಂವಿಧಾನದ 370ನೇ ವಿಧಿ ತಾತ್ಕಾಲಿಕ ಸ್ವರೂಪದ್ದಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಸನಸಭೆ ಅಸ್ತಿತ್ವದಲ್ಲಿ ಇರದೇ ಇದ್ದಾಗ ರಾಷ್ಟ್ರಪತಿ ಈ ಕಾಯ್ದೆ ವಾಪಸ್ ಪಡೆಯಲು ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್




ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ. ತೀರ್ಪು ನೀಡಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಸೂರ್ಯ ಕಾಂತ್, ಸಂಜಯ್ ಕಿಶನ್ ಕೌಲ್ ಹಾಗೂ ಸಂಜೀವ್ ಖನ್ನ ಅವರಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಸೂರ್ಯ ಕಾಂತ್ ಅವರು ಪ್ರತ್ಯೇಕ ತೀರ್ಪು ನೀಡಿದ್ದಾರೆ. ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸಂಜೀವ್ ಖನ್ನ ಪ್ರತ್ಯೇಕ, ಆದರೆ, 370ನೇ ರದ್ಧತಿಯ ಪರವಾದ ತೀರ್ಪು ನೀಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಿಂದ ಲಡಾಖ್ ಪ್ರತ್ಯೇಕಿಸಿ ಕೇಂದ್ರಾಡಳಿತ ಪ್ರದೇಶ ಮಾಡುವ ನಿರ್ಧಾರದ ಸಿಂಧುತ್ವವನ್ನೂ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಆಗಸ್ಟ್ 5, (2ನೇ ಪುಟಕ್ಕೆ)

### 370 ರದ್ಧತಿ : ಸುಪ್ರೀಂ ತೀರ್ಪು ಐತಿಹಾಸಿಕ ಎಂದ ಪ್ರಧಾನಿ

**ನವದೆಹಲಿ, ಡಿ. 11 – ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸುವ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿರುವುದು ಐತಿಹಾಸಿಕ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.**

**ಆಗಸ್ಟ್ 5, 2019ರಲ್ಲಿ ಸಂಸತ್ತು ತೆಗೆದುಕೊಂಡ ನಿರ್ಧಾರ ಸಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಇದು ಜಮ್ಮು, ಕಾಶ್ಮೀರ ಹಾಗೂ ಲಡಾಖ್‌ನಲ್ಲಿರುವ ನನ್ನ ಸಹೋದರ - ಸಹೋದರಿಯರ ಆಶಾಭಾವನೆಯ ಘೋಷಣೆಯಾಗಿದೆ. ಇದು ಪ್ರಗತಿ ಹಾಗೂ ಐಕ್ಯತೆಯ ಘೋಷಣೆ ಎಂದು ಪ್ರಧಾನಿ ಹೇಳಿದ್ದಾರೆ.**

**ಜಮ್ಮು, ಕಾಶ್ಮೀರ ಹಾಗೂ ಲಡಾಖ್ ಜನತೆಯ ಕನಸುಗಳನ್ನು ಸಾಕಾರಗೊಳಿಸಲು ನಮ್ಮ ಬದ್ಧತೆಯನ್ನು ಈಡೇರಿಸುತ್ತೇವೆ ಎಂದೂ ಮೋದಿ ಹೇಳಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಗೃಹ ಚಿವ ಅಮಿತ್ ಷಾ, ಒಂದು ಕಾಲದಲ್ಲಿ ಹಿಂಸಾ ಪೀಡಿತವಾಗಿ ಕಾಶ್ಮೀರ ಕಣಿವೆಯಲ್ಲಿ** (2ನೇ ಪುಟಕ್ಕೆ)

# ರೈತರ ಸಾಲ ಮರು ಪಾವತಿಗೆ ಒತ್ತಡ ಬೇಡ

ಬೆಳಗಾವಿ, ಡಿ. 11 - ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರ ಸಾಲ ಮರುಪಾವತಿಗೆ ಒತ್ತಡ ಹೇರದಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡುವಂತೆ ಮುಖ್ಯ ಮಂತ್ರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಅವರು ಭರವಸೆ ನೀಡಿದರು. ತಮ್ಮನ್ನು ಭೇಟಿ ಮಾಡಿದ ರೈತ ಸಂಘಟನೆಗಳ ಪ್ರತಿನಿಧಿಗಳ ಅಹವಾಲು ಆಲಿಸಿದ ಸಚಿವರು ಸಮಸ್ಯೆಗಳನ್ನು ಕಾನೂನಿನ ಪರಿಮಿತಿ ಹಾಗೂ ಸಂಪನ್ಮೂಲಗಳ ಲಭ್ಯತೆ ಆಧಾರದ ಮೇಲೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

**ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಲು ಕೇಂದ್ರಕ್ಕೆ ಮನವಿ**

ರೈತರ ಪಂಪ್ ಸೆಟ್‌ಗಳಿಗೆ 7 ಗಂಟೆ ಉಚಿತ ವಿದ್ಯುತ್ ನೀಡಲಾಗುತ್ತದೆ. ಉತ್ಪಾದನೆ, ಲಭ್ಯತೆ ಆಧಾರದ ಮೇಲೆ ಇದರ ಅವಧಿ ಹೆಚ್ಚಳದ ಬಗ್ಗೆ ಪರಿಶೀಲಿಸಲಾಗುವುದು ಎಂದು ಕೃಷಿ ಸಚಿವರು ಹೇಳಿದರು. (3ನೇ ಪುಟಕ್ಕೆ)

# ಶಾಲೆಗಳಿಗೆ ಗುಣಮಟ್ಟದ ಸಮವಸ್ತ್ರ : ಸಚಿವ

ಬೆಂಗಳೂರು, ಡಿ. 11 - ರಾಜ್ಯದ ಶಾಲೆಗಳಿಗೆ ಗುಣಮಟ್ಟದ ಸಮವಸ್ತ್ರ ಸರಬರಾಜು ಮಾಡಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಮಧುಬಂಗಾರಪ್ಪ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಎಸ್. ರವಿಕುಮಾರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2023-24ನೇ ಸಾಲಿಗೆ ಪ್ರತಿ ವಿದ್ಯಾರ್ಥಿಗೆ ಪಠ್ಯ ಪುಸ್ತಕಕ್ಕೆ ಸರಾಸರಿ 397 ರೂ. ವೆಚ್ಚ ಮಾಡಲಾಗಿದೆ ಎಂದರು.

ಶೂ ಮತ್ತು ಸಾಕ್ಸ್‌ಗಳಿಗೆ 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ತಲಾ 265 ರೂ., 6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ 295 ರೂ., ಹಾಗೂ 9 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ 325 ರೂ.ಗಳನ್ನು ವೆಚ್ಚ ಮಾಡಲಾಗಿದೆ. ಅದೇ ರೀತಿ 1 ರಿಂದ 10ನೇ ತರಗತಿವರೆಗೆ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ತಲಾವಾರು ವೆಚ್ಚ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

2023-24ನೇ ಸಾಲಿಗೆ ರಾಜ್ಯದ (2ನೇ ಪುಟಕ್ಕೆ)

# ಕಂದಾಯ ಇಲಾಖೆ ಹಳೆ ದಾಖಲೆ ಡಿಜಿಟಲೀಕರಣ

ದಾವಣಗೆರೆ, ಡಿ. 11 – ಕಂದಾಯ ಇಲಾಖೆಯ ಹಳೆಯ ದಾಖಲೆಗಳ ಗಣಕೀಕರಣಕ್ಕೆ ಜಿಲ್ಲಾಡಳಿತ ಮುಂದಾಗಿದೆ. ಮೊದಲ ಹಂತದಲ್ಲಿ ದಾವಣಗೆರೆ ಹಾಗೂ ಹರಿಹರ ತಾಲ್ಲೂಕು ಮತ್ತು ದಾವಣಗೆರೆ ಉಪವಿಭಾಗಾಧಿಕಾರಿ ಕಚೇರಿಯ ಕಡತಗಳ ಗಣಕೀಕರಣವಾಗಲಿದೆ.

2001ಕ್ಕೂ ಹಿಂದಿನ ಪಹಣಿ, ಮ್ಯುಟೇಷನ್, ಭೂ ಮಂಜೂರಾತಿ, ಸಾಗುವಳಿ ಚೀಟಿ ಮತ್ತಿತರೆ ದಾಖಲೆಗಳು ಇದುವರೆಗೂ ಕೈ ಬರಹದಲ್ಲೇ ಇವೆ. ಇವುಗಳನ್ನು ಡಿಜಿಟಲೀಕರಣ ಮಾಡುವ ಮೂಲಕ ದಾಖಲೆಗಳನ್ನು ಸಂರಕ್ಷಿಸುವ ಜೊತೆಗೆ ಅವುಗಳು ಸುಲಭವಾಗಿ ಜನರಿಗೆ ಲಭ್ಯವಾಗುವಂತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಪ್ರಸಕ್ತ ಪ್ರತಿನಿತ್ಯ 50-100 ಜನರು ತಾಲ್ಲೂಕು ಕಚೇರಿಗಳಿಗೆ ಹಳೆಯ ದಾಖಲೆಗಳಿಗಾಗಿ ಅಲೆದಾಡುತ್ತಿದ್ದಾರೆ. ಈ ಸಮಸ್ಯೆ ನೀಗಿಸುವ ಸಲುವಾಗಿ ಜಿಲ್ಲಾಡಳಿತ ಡಿಜಿಟಲೀಕರಣದ ಮಾರ್ಗ ಹಿಡಿದಿದೆ. ಮೊದಲ ಹಂತದ ನಂತರ, ಜಿಲ್ಲೆಯ ಉಳಿದ ತಾಲ್ಲೂಕುಗಳ ದಾಖಲೆಗಳೂ ಗಣಕೀಕರಣವಾಗಲಿವೆ.

ಹಳೆಯ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಪಿ.ಡಿ. ಎಫ್. ಸ್ವರೂಪಕ್ಕೆ ತಂದು ರಕ್ಷಿಸಲಾಗುವುದು. ಈ ಕಾರ್ಯಕ್ಕಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನೇ ಬಳಸಿಕೊಳ್ಳಲಾಗುವುದು. ಡಿಜಿಟಲೀಕರಣಕ್ಕಾಗಿ ಪ್ರತ್ಯೇಕ ತಂಡಗಳನ್ನು ರಚಿಸಲಾಗುವುದು. ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ವ್ಯಾಪ್ತಿಯ ದಾಖಲೆಗಳ (2ನೇ ಪುಟಕ್ಕೆ)



**ದಾವಣಗೆರೆ ಹಾಗೂ ಹರಿಹರ ತಾಲ್ಲೂಕಿಗೆ ಸಂಬಂಧಿಸಿದ ಕಂದಾಯ ಇಲಾಖೆ ದಾಖಲೆಗಳು ಮತ್ತು ದಾವಣಗೆರೆ ಉಪ ವಿಭಾಗಾಧಿಕಾರಿ ಕಚೇರಿಯ ಹಳೆಯ ದಾಖಲೆಗಳ ಡಿಜಿಟಲೀಕರಣಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಉಳಿದ ತಾಲ್ಲೂಕುಗಳ ದಾಖಲೆಗಳ ಡಿಜಿಟಲೀಕರಣ ಮಾಡಲಾಗುವುದು.**

**- ಎಂ.ವಿ. ವೆಂಕಟೇಶ್, ಜಿಲ್ಲಾಧಿಕಾರಿ**

# ಆನೆ - ಮಾನವ ಸಂಘರ್ಷ ತಡೆಗೆ ಬ್ಯಾರಿಕೇಡ್

ಬೆಳಗಾವಿ, ಡಿ. 11 - ಆನೆ ಮತ್ತು ಮಾನವ ಸಂಘರ್ಷ ತಪ್ಪಿಸಲು 200 ಕೋಟಿ ರೂ ವೆಚ್ಚದಲ್ಲಿ ಬ್ಯಾರಿಕೇಡ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಕೆ.ಹರೀಶ್ ಕುಮಾರ್ ಅವರ ಸಚಿವರು, ಆನೆಗಳು ಜನವಸತಿ ಪ್ರದೇಶಕ್ಕೆ ಬರುವುದನ್ನು ತಡೆಯಲು 640 ಕಿಮೀ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ 312 ಕಿಮೀ ಬ್ಯಾರಿಕೇಡ್ ಅಳವಡಿಸಲಾಗಿದೆ. ಒಟ್ಟು 200 ಕೋಟಿ ರೂ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ನಡೆಯುತ್ತಿದೆ ಎಂದರು.

# ಜಿಲ್ಲಾ ಆಸ್ಪತ್ರೆಗಳಿಗೆ ಹಿಮೋಫಿಲಿಯಾ ಪತ್ತೆ ಯಂತ್ರ

ಬೆಳಗಾವಿ, ಡಿ. 11 - ರಾಜ್ಯದಲ್ಲಿ ಹಿಮೋಫಿಲಿಯಾ ರೋಗವನ್ನು ಶೀಘ್ರದಲ್ಲಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹಿಮೋಫಿಲಿಯಾ ಪತ್ತೆ ಹಚ್ಚುವ ಯಂತ್ರೋಪಕರಣಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದರು.

ಎಸ್.ರುದ್ರೇಗೌಡ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ರಾಜ್ಯ ರಕ್ತಕೋಶ (4ನೇ ಪುಟಕ್ಕೆ)

# ಪಡಿತರ ಅಕ್ರಮ ತಡೆಗೆ ಸಂಪೂರ್ಣ ಪ್ರಯತ್ನ: ಸಚಿವ ಮುನಿಯಪ್ಪ

ಬೆಳಗಾವಿ, ಡಿ. 11 - ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ವಿತರಿಸುವ ಪಡಿತರ ಅಕ್ರಮ ತಡೆಗೆ ಸಂಪೂರ್ಣ ಪ್ರಯತ್ನ ಮಾಡಲಾಗುತ್ತಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವ ಕೆ.ಹೆಚ್. ಮುನಿಯಪ್ಪ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸುವ ಪಡಿತರ ಅಕ್ರಮ ಸಾಗಾಣಿಕೆ ಕಂಡು ಬಂದಲ್ಲಿ ಕೂಡಲೇ ದಾಳಿ ನಡೆಸಿ, ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಪ್ರಕರಣ ದಾಖಲಿಸಿ, ಅಕ್ರಮ ಪಡಿತರ ದಾಸ್ತಾನು ಮುಟ್ಟುಗೋಲು (4ನೇ ಪುಟಕ್ಕೆ)

# ಬರ ನಿರ್ವಹಣೆಗೆ 895 ಕೋಟಿ ರೂ. : ಸಚಿವ ಕೃಷ್ಣ ಭೈರೇಗೌಡ



ಬೆಳಗಾವಿ, ಡಿ. 11 - ಬರ ಪರಿಸ್ಥಿತಿ ಎದುರಿಸುವ ಸಲುವಾಗಿ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಖಾತೆಗಳಲ್ಲಿ ಬರ ನಿರ್ವಹಣೆಗೆ ಒಟ್ಟು 895 ಕೋಟಿ ರೂ. ಹಣ ಮೀಸಲಿರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಹೇಳಿದರು.

ವಿಧಾನಸಭೆ ಕಲಾಪದಲ್ಲಿ ಬರ ನಿರ್ವಹಣೆ ಕುರಿತ ಚರ್ಚೆಗೆ ಉತ್ತರ ನೀಡಿದ ಅವರು, ಮಳೆ ಕೊರತೆಯಿಂದಾಗಿ 46 ಲಕ್ಷ ಹೆಕ್ಟೇರ್ ಕೃಷಿ, 2 ಲಕ್ಷ ಹೆಕ್ಟೇರ್ ತೋಟಗಾರಿಕೆ ಸೇರಿ 48 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿಗಳು ಬರ ನಿರ್ವಹಣೆಗಾಗಿ ಮೂರು ಸಭೆಗಳನ್ನು ನಡೆಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದ್ದಾರೆ. ಅಲ್ಲದೇ ಸರ್ಕಾರವು ಬರ ನಿರ್ವಹಣೆಗಾಗಿ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಈಗಾಗಲೇ 8 ಸಭೆಗಳನ್ನು ನಡೆಸಿ ಬರ ಪರಿಸ್ಥಿತಿ ಹಾಗೂ ಜಿಲ್ಲಾಡಳಿತಗಳು ಕೈಗೊಂಡಿರುವ ಮುಂಜಾಗ್ರತೆ ಹಾಗೂ ಪರಿಹಾರ ಕ್ರಮಗಳನ್ನು ಪರಾಮರ್ಶಿಸಿ ಅಗತ್ಯ ಸಲಹೆ, ಸೂಚನೆಗಳನ್ನು ನೀಡಿದೆ ಎಂದು ಹೇಳಿದರು.

ರಾಜ್ಯದ 22 ಜಿಲ್ಲೆಗಳಿಗೆ ಸ್ವತಃ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ಬರಗಾಲದ ಸ್ಥಿತಿಯನ್ನು ಅವಲೋಕಿಸಿದ್ದೇನೆ. ರಾಜ್ಯದ ಪ್ರತಿ ಕಂದಾಯ ವಿಭಾಗದಲ್ಲಿ ಆಯಾ ವಿಭಾಗದ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಸಭೆ ಜರುಗಿಸಿ ಕೈಗೊಳ್ಳಬೇಕಾದ ತುರ್ತು ಕ್ರಮಗಳ ಕುರಿತು ನಿರ್ದೇಶನ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಬರದ ಹಿನ್ನೆಲೆಯಲ್ಲಿ ರೂ. 18,171 ಕೋಟಿ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ (4ನೇ ಪುಟಕ್ಕೆ)

# ಗದ್ದಲದ ನಡುವೆ ಐದು ಮಸೂದೆಗಳಿಗೆ ಅಂಗೀಕಾರ

**ಜಮೀರ್ ಖಾನ್ ಹೇಳಿಕೆ ಖಂಡಿಸಿ ಬಿಜೆಪಿ - ಜೆಡಿಎಸ್ ಶಾಸಕರ ಪ್ರತಿಭಟನೆ**

ಬೆಳಗಾವಿ, ಡಿ. 11 – ಸಚಿವ ಜಮೀರ್ ಅಹಮದ್ ಖಾನ್ ಅವರು 'ಮುಸ್ಲಿಂ ವಿಧಾನಸಭಾಧ್ಯಕ್ಷ' ಎಂದು ನೀಡಿದ ಹೇಳಿಕೆಯನ್ನು ಪ್ರಶ್ನಿಸಿ ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ದಿನವಿಡೀ ವಿಧಾನಸಭೆಯಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಗದ್ದಲದ ನಡುವೆ ಐದು ಮಸೂದೆಗಳನ್ನು ಯಾವುದೇ ಚರ್ಚೆ ಇಲ್ಲದೇ ಅಂಗೀಕರಿಸಲಾಗಿದೆ. ಗದ್ದಲದಲ್ಲೇ ಸರ್ಕಾರ ಬರ ಕುರಿತ ಚರ್ಚೆಗೆ ಉತ್ತರವನ್ನೂ ನೀಡಿದೆ.

ವಸತಿ ಸಚಿವರಾಗಿರುವ ಖಾನ್ ಇತ್ತೀಚೆಗೆ ತೆಲಂಗಾಣದಲ್ಲಿ ಚುನಾವಣಾ ಪ್ರಚಾರ ನಡೆಸುವಾಗ ಮಾತನಾಡಿ, ಮುಸ್ಲಿಂ ಸ್ಪೀಕರ್ ಎದುರು ಬಿಜೆಪಿ ಶಾಸಕರು ಕೈ ಮುಗಿದು ನಿಲ್ಲುತ್ತಾರೆ ಎಂದು ಹೇಳಿದ್ದರು.

ಬಿಜೆಪಿ ಶಾಸಕ ಕೃಷ್ಣ ನಾಯಕ್ ಅವರು ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಲು ಖಾನ್ ಎದ್ದು ನಿಂತರು. ಆಗ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಆಕ್ಷೇಪಿಸಿ, ಸ್ಪೀಕರ್ ಸ್ಥಾನಕ್ಕೆ ಖಾನ್ ಅಗೌರವ ತೋರಿದ್ದಾರೆ. ಹಿಂದೂಗಳು ಹಾಗೂ ಮುಸ್ಲಿಮರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ. ಅವರು ಮಾತನಾಡಲು ಬಿಡುವುದಿಲ್ಲ (4ನೇ ಪುಟಕ್ಕೆ)


## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಕನ್ನಡ ನಾಡು ಜನತಾ ಸಮಿತಿಯ ಅಧ್ಯಕ್ಷರು ಹಾಗೂ
ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಜಂಟಿ ಕಾರ್ಯದರ್ಶಿಗಳಾದ
ಶ್ರೀ ದಸ್ತಗೀರ್ ಎಸ್. ಅಸಾದುಲ್ಲಾ ಹಾಗೂ ಶ್ರೀಮತಿ ಸಾಹಿರಾ ಖಾನಂ
ದಂಪತಿಯ 19 ನೇಯ ಮದುವೆ ವಾರ್ಷಿಕೋತ್ಸವದ
ಹಾರ್ದಿಕ ಶುಭಾಶಯಗಳು...
ಜನ್ಮ ಜನ್ಮಕ್ಕೂ ನಿಮ್ಮ ಈ ಸಂಬಂಧ ಹೀಗೆ ಸಂತೋಷದಿಂದ ಕೂಡಿರಲಿ,
ನಿಮ್ಮ ಎಲ್ಲಾ ಕನಸುಗಳು ನನಸಾಗಲಿ ಎಂದು ಹಾರೈಸುತ್ತೇವೆ....

ಕನ್ನಡ ನಾಡು ಜನತಾ ಸಮಿತಿಯ ಎಲ್ಲಾ ಪದಾಧಿಕಾರಿಗಳು,
ಕೆಪಿಸಿಸಿ ಕಾರ್ಮಿಕ ವಿಭಾಗದ ಎಲ್ಲಾ ಸ್ನೇಹಿತರು ಹಾಗೂ ಮಿತ್ರರು.






39 ವಸಂತಗಳನ್ನು ಪೂರೈಸಿ 40ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ ಹಾಗೂ
ವೈವಾಹಿಕ ಜೀವನದ 12 ವರ್ಷಗಳನ್ನು ಪೂರೈಸಿ 13ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ
ಶ್ರೀ ಧನ್ಯಕುಮಾರ್ ಶಾಮನೂರು ಮತ್ತು ಶ್ರೀಮತಿ ಅಶ್ವಿನಿ ಧನ್ಯಕುಮಾರ್
ದಂಪತಿಗೆ ವಿವಾಹ ವಾರ್ಷಿಕೋತ್ಸವ ಹಾಗೂ ಹುಟ್ಟುಹಬ್ಬದ ಶುಭಾಶಯಗಳು.
8 ವರ್ಷಗಳನ್ನು ಪೂರೈಸಿ 9ನೇ ವರ್ಷಕ್ಕೆ ಕಾಲಿಡುತ್ತಿರುವ ಮಗ ಮಾಸ್ಟರ್ ಶ್ರೇಯನ್
ಅವರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ದೇವರು ಇವರಿಗೆ ಆರೋಗ್ಯ, ಆಯುಷ್ಯ, ಸುಖ-ಶಾಂತಿ-ನೆಮ್ಮದಿ ಕರುಣಿಸಲೆಂದು ಶುಭಾಶಯಗಳನ್ನು ಕೋರುತ್ತಿರುವ

ಸಿಬ್ಬಂದಿ ವರ್ಗ


- ✦ ದೇವನಗರಿ ಗ್ರೀನ್ ಪ್ಲಾನೆಟ್ ಇನ್‌ಫ್ರಾ ಪ್ರೈ.ಲಿ. ದಾವಣಗೆರೆ–ಬೆಂಗಳೂರು
- ✦ ಸೂರ್ಯ ಹೆಲ್ತ್ ಕೇರ್, ದಾವಣಗೆರೆ.
- ✦ ತೇಜಸ್ ಲ್ಯಾಬೊರೇಟರಿ, ದಾವಣಗೆರೆ.
- ✦ ಸೂರ್ಯ ಹೈಟೆಕ್ ಫಾರ್ಮಿಂಗ್, ಕೊಗ್ಗನೂರು.
- ✦ ಸೂರ್ಯ ಬೊಟಿಕ್, ಶಾಮನೂರು.




# ಶಿಕ್ಷಣ ಸಂಸ್ಥೆಗಳಲ್ಲಿ ಬಡ್ತಿ ಮೀಸಲಾತಿ ಪ್ರಸ್ತಾಪ ಇಲ್ಲ

ನವದೆಹಲಿ, ಡಿ. 11 – ಕೇಂದ್ರ ಶಿಕ್ಷಣ ಸಂಸ್ಥೆಗಳಲ್ಲಿ ಒ.ಬಿ.ಸಿ. ವರ್ಗದವರಿಗೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಪ್ರಸ್ತಾಪ ಇಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ಸುಭಾಷ್ ಸರ್ಕಾರ್ ಅವರು ಲೋಕಸಭೆಗೆ ಈ ಮಾಹಿತಿ ನೀಡಿದ್ದಾರೆ. ತಮಿಳುನಾಡಿನ ಸಂಸದ ಮಾಣಿಕ್ಯಂ ಟ್ಯಾಗೋರ್ ಅವರು ಈ ಕುರಿತು ಪ್ರಶ್ನೆ ಕೇಳಿದ್ದರು.

# ಮಹಿಳೆ ಬೆತ್ತಲೆಗೊಳಿಸಿ ಹಲ್ಲೆ ; ಏಳು ಜನರ ಬಂಧನ

ಬೆಳಗಾವಿ, ಡಿ. 11 – ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ ಹಲ್ಲೆ ಮಾಡಿ ವಿದ್ಯುತ್ ಕಂಬಕ್ಕೆ ಕಟ್ಟಿದ ಘಟನೆ ನಡೆದಿದೆ. ಮಹಿಳೆಯ ಮಗ ಹುಡುಗಿಯೊಬ್ಬಳ ಜೊತೆ ಓಡಿ ಹೋದ ಹಿನ್ನೆಲೆಯಲ್ಲಿ ಈ ಹಲ್ಲೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಪ್ರಿಯಾಂಕ ಎಂಬ ಯುವತಿಯ ನಿಶ್ಚಿತಾರ್ಥ ನೆರವೇರಿತ್ತು. ಆದರೆ, ಯುವತಿ 24 ವರ್ಷದ ದುಂಡಪ್ಪ ಎಂಬ ವ್ಯಕ್ತಿ ಜೊತೆ ಓಡಿ ಹೋಗಿದ್ದರು. ಈ ಘಟನೆಯ ನಂತರ ಹುಡುಗಿಯ ಕಡೆಯವರು, ಹುಡುಗನ ತಾಯಿಯನ್ನು ಬೆತ್ತಲೆಗೊಳಿಸಿ ಹಲ್ಲೆ ನಡೆಸಿದ್ದಾರೆ.

ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಧಾವಿಸಿ ಮಹಿಳೆಯನ್ನು ಮುಕ್ತಗೊಳಿಸಿದ್ದಾರೆ. ಈ ಸಂಬಂಧ ಏಳು ಜನರನ್ನು ಬಂಧಿಸಿದ್ದಾರೆ. ಅಹಿತಕರ ಘಟನೆ ತಪ್ಪಿಸಲು ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ.

ಘಟನೆಯ ಹಿನ್ನೆಲೆಯ ಯುವಕ ಹಾಗೂ ಯುವತಿ ಇಬ್ಬರೂ ಒಂದೇ ಸಮುದಾಯ ಹಾಗೂ ಒಂದೇ ಹಳ್ಳಿಗೆ ಸೇರಿದವರು ಎಂದು ಬೆಳಗಾವಿ ಪೊಲೀಸ್ ಆಯುಕ್ತ ಸಿದ್ದರಾಮಪ್ಪ ತಿಳಿಸಿದ್ದಾರೆ.

ಘಟನೆಯನ್ನು ಖಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಘಟನೆ ಅಮಾನವೀಯ. ಇದರಿಂದ ಇಡೀ ಸಮಾಜವೇ ತಲೆತಗ್ಗಿಸುವಂತಾಗಿದೆ. ಇಂತಹ ಹೀನ ಕೃತ್ಯಗಳನ್ನು ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದರು.

ಪ್ರಕರಣದ ಸಂಬಂಧ ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮವಹಿಸುವ ಮೂಲಕ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸುವ ಸಂಪೂರ್ಣ ಹೊಣೆ ನಮ್ಮದು ಎಂದಿದ್ದಾರೆ.

ಗೃಹ ಸಚಿವ ಜಿ. ಪರಮೇಶ್ವರ ಅವರು ಹಲ್ಲೆಗೆ ಗುರಿಯಾದ ಮಹಿಳೆಯನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದಾರೆ.

ನಂತರ ಮಾತನಾಡಿರುವ ಅವರು, ಘಟನೆಗೆ ಸಂಬಂಧಿಸಿದಂತೆ ಇನ್ನಿಬ್ಬರ ಹುಡುಕಾಟ ನಡೆದಿದೆ ಎಂದು ಹೇಳಿದರು.



## ಈಶ್ವರ-ಪಾರ್ವತಿ, ಗಣಪತಿ ದೇವಸ್ಥಾನದಲ್ಲಿ ಕಡೇ ಕಾರ್ತಿಕ

ದಾವಣಗೆರೆ, ಡಿ. 11 - ನಗರದ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ, ಗಣಪತಿ ದೇವಸ್ಥಾನದಲ್ಲಿ ಕಡೇ ಕಾರ್ತಿಕ ಆಚರಿಸಲಾಯಿತು. ದೇವಸ್ಥಾನದ ಅಧ್ಯಕ್ಷ ಬೆಳವನೂರು ನಾಗರಾಜಪ್ಪ, ಟ್ರಸ್ಟ್ ಸದಸ್ಯ ಡಾ. ಮಂಜುನಾಥ್ ಕುರ್ಕಿ, ಬೆಳವನೂರು ಪ್ರಭುದೇವ, ಡಾ. ಮಂಜುನಾಥ ತೆಂಬದ, ಷಣ್ಮುಖಪ್ಪ ಹಾಗೂ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

## ನಗರದಲ್ಲಿ ವಿಶ್ವ ಫುಟ್‌ಬಾಲ್ ದಿನಾಚರಣೆ



ದಾವಣಗೆರೆ, ಡಿ. 11- ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ವತಿಯಿಂದ ಈಚೆಗೆ ವಿಶ್ವ ಫುಟ್‌ಬಾಲ್ ದಿನಾಚರಣೆಯನ್ನು ಫುಟ್‌ಬಾಲ್ ಕ್ರೀಡಾಪಟುಗಳಿಗೆ ಪ್ರಮಾಣ ಪತ್ರ ವಿತರಿಸುವ ಮೂಲಕ ಆಚರಿಸಲಾಯಿತು. ಜಿಲ್ಲಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಪ್ರಮಾಣ ಪತ್ರ ವಿತರಿಸಿದರು. ರೇವಣಸಿದ್ದಪ್ಪ, ಅಲ್ಲಾವಲಿ ಮುಜಾಹಿದ್ ಖಾನ್, ಮೊಹ್ಮದ್ ರಫೀಕ್, ಅಶ್ರಫ್ ಅಲಿ, ಮಹ್ಮದ್ ಸಮೀಪ್, ಅಹ್ಮದ್ ಮುಸ್ತಫಾ, ತನ್ವೀರ್ ಅಹ್ಮದ್ ಮತ್ತಿತರರಿದ್ದರು.

## ಬಾಡಾ ಕ್ರಾಸ್ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ಕಾರ್ತಿಕೋತ್ಸವ

ದಾವಣಗೆರೆ, ಡಿ.11- ನಗರ ಸಮೀಪದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ದಿ. 13ರ ಬುಧವಾರ ಕಾರ್ತಿಕೋತ್ಸವ ಏರ್ಪಡಿಸಲಾಗಿದೆ. ಶ್ರೀ ಗುರು ಪಂಚಾಕ್ಷರಿ ಗವಾಯಿಗಳವರ ಅಂಧರ ಶಿಕ್ಷಣ ಸಮಿತಿ ಹಾಗೂ ಸಿಬ್ಬಂದಿ ವರ್ಗ, ಸರ್ವ ಸಮಾಜದ ಭಕ್ತರು ಆಗಮಿಸಬೇಕಾಗಿ ಸಮಿತಿಯ ಕಾರ್ಯದರ್ಶಿ ಕರಿಬಸಪ್ಪ ಕೋರಿದ್ದಾರೆ.

## ನ್ಯಾ.ಸದಾಶಿವ ಆಯೋಗದ ವರದಿ ಜಾರಿಗಾಗಿ ಆಗ್ರಹಿಸಿ ಪ್ರತಿಭಟನೆ



ದಾವಣಗೆರೆ, ಡಿ.11- ನ್ಯಾ. ಜೆ. ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ, ದಲಿತ ಸಂಘಟನೆಗಳ ಮಹಾ ಒಕ್ಕೂಟದ ಪದಾಧಿಕಾರಿಗಳು ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಂತರ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಡಿಎಸ್ಸೆಸ್ ರಾಜ್ಯ ಸಂಚಾಲಕ ಹೆಚ್. ಮಲ್ಲೇಶ್, ಕರ್ನಾಟಕದ ಪರಿಶಿಷ್ಟ ಜಾತಿಗಳ ಸಂವಿಧಾನದ ಶೇ.15ರ ಮೀಸಲಾತಿ ಸೌಲಭ್ಯಗಳು ತಾರತಮ್ಯ, ಅಸಮಾನ ಹಂಚಿಕೆ ಪರಿಣಾಮವಾಗಿ 2005ರಲ್ಲಿ ರಚನೆಗೊಂಡಿರುವ ನ್ಯಾಯಮೂರ್ತಿ ಎ.ಜೆ. ಸದಾಶಿವ ವಿಚಾರಣಾ ಆಯೋಗ 2012ರಲ್ಲಿ ಸಲ್ಲಿಸಿರುವ ವರದಿಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಸರ್ಕಾರ ಸದಾಶಿವ ಆಯೋಗದ ವರದಿ ಜಾರಿಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಪ್ರಥಮ ಅಧಿವೇಶನದಲ್ಲೇ ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು. ಅದರಂತೆ ಈಗಾಗಲೇ ಆರಂಭವಾಗಿರುವ ಅಧಿವೇಶನದಲ್ಲಿ ಅಂಗೀಕರಿಸಿ ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

ಸಿ.ಬಸವರಾಜ್, ಹೆಚ್.ನಿಂಗಪ್ಪ, ಕುಂದುವಾಡ ಮಂಜುನಾಥ್, ಜಿಗಳಿ ಹಾಲೇಶ್, ರಾಘವೇಂದ್ರ ಕಡೇಮನಿ, ಹೆಣ್ಣೂರು ಶ್ರೀನಿವಾಸ್, ಚಂದ್ರಪ್ಪ ಇತರರು ಪ್ರತಿಭಟನೆಯಲ್ಲಿದ್ದರು.

## ನಗರದಲ್ಲಿ ಇಂದು ಪುಸ್ತಕ ಪಂಚಮಿ ವಾರ್ಷಿಕೋತ್ಸವ

ದಾವಣಗೆರೆ.ಡಿ.11- ಡಾ. ಎಚ್.ಎಫ್ ಕಟ್ಟೀಮನಿ ಪೌಢ ಶಿಕ್ಷಣ ಪ್ರತಿಷ್ಠಾನ, ಅಪರ ಆಯುಕ್ತರ ಕಾರ್ಯಾಲಯ (ಧಾರವಾಡ) ಮತ್ತು ಜಿಲ್ಲಾ ಘಟಕ ನಗರದ ಡಾ.ಬಾಣಾಪುರಮಠ ಮಕ್ಕಳ ಕ್ಲಿನಿಕ್ ಹಾಗೂ ಈಶ್ವರಮ್ಮ ಪ್ರೌಢಶಾಲೆ ಮಂಡಳಿ ಇವರುಗಳ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 12 ರ ಮಂಗಳವಾರ ಈಶ್ವರಮ್ಮ ಪ್ರೌಢಶಾಲೆಯಲ್ಲಿ ಪುಸ್ತಕ ಪಂಚಮಿಯ 14ನೇ ವಾರ್ಷಿಕೋತ್ಸವ ಸಮಾರಂಭ ಆಯೋಜಿಸಲಾಗಿದೆ.

ಅಂದು ಮಧ್ಯಾಹ್ನ 2.30ಕ್ಕೆ ಪುಸ್ತಕ ವಾಚನ ಸಹಾಯ ಯೋಜನೆಯ 21 ಶಾಲೆಗಳ ಫಲಾನುಭವಿಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಈಶ್ವರಮ್ಮ ಶಾಲೆಯ ಗೌರವ ಕಾರ್ಯದರ್ಶಿ ಎ.ಆರ್.ಉಷಾ ರಂಗನಾಥ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಡಿಡಿಪಿಐ ಜಿ.ಕೊಟ್ರೇಶ್, ಈಶ್ವರಮ್ಮ ಶಾಲೆಯ ಪ್ರಾಚಾರ್ಯ ಕೆ. ಎಸ್.ಪ್ರಭುಕುಮಾರ್, ಸಹ ಪ್ರಾಚಾರ್ಯೆ ಶಶಿರೇಖಾ ಸೇರಿದಂತೆ ಹಲವು ಗಣ್ಯರು ಆಗಮಿಸಲಿದ್ದಾರೆ ಎಂದು ಪ್ರತಿಷ್ಠಾನದ ಸಹ ಸಂಚಾಲಕರೂ ಆಗಿರುವ ಮಕ್ಕಳ ತಜ್ಞ ಡಾ.ಸಿ.ಆರ್. ಬಾಣಾಪುರಮಠ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ವಿಶ್ರಾಂತ ಬಿಇಓ ಪ್ರಕಾಶ್ ಬೂಸ್ನೂರು, ವಿ.ಸಿ.ಪುರಾಣಿಕ ಮಠ, ಪಿ.ಎಂ.ಶಿವಕುಮಾರ್, ಪ್ರಭು ಬಾಣಾಪುರಮಠ ಇದ್ದರು.

## ದಾನಮ್ಮ ದೇವಸ್ಥಾನದಲ್ಲಿ ಇಂದು ಛಟ್ಟಿ ಅಮವಾಸ್ಯೆ

ದಾವಣಗೆರೆ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮದೇವಿ ದೇವಸ್ಥಾನದಲ್ಲಿ ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ದೇವಿಗೆ ಅಭಿಷೇಕ, ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವುದು, ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗಲಿದೆ.

ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಮಠದಲ್ಲಿ ಇಂದು ಅಮಾವಾಸ್ಯೆ

ದಾವಣಗೆರೆ ಸಮೀಪದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ಇಂದು ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಪಾದಗಳಿಗೆ ಅಭಿಷೇಕ - ಪೂಜೆ, ನಂತರ ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ. ಶ್ರೀಮತಿ ಲೀಲಾ, ಡಿ. ಕೊಟ್ರಪ್ಪ ಅವರು ಪ್ರಸಾದ ಸೇವಾಕರ್ತರಾಗಿದ್ದಾರೆ.

## ಹಳೆ ದಾಖಲೆ ಡಿಜಿಟಲೀಕರಣ

**(1ನೇ ಪುಟದಿಂದ)** ಗಣಕೀಕರಣಕ್ಕೆ ಕ್ರಮ ತೆಗೆದುಕೊಳ್ಳಲಿದ್ದಾರೆ.

ನಾಲ್ಕೈದು ದಶಕಗಳ ಹಿಂದಿನ ಕಂದಾಯ ಇಲಾಖೆ ದಾಖಲೆಗಳು ಈಗಾಗಲೇ ಶಿಥಿಲವಾಗಿವೆ. ಅವುಗಳು ಸಂಪೂರ್ಣ ಹಾಳಾಗುವುದಕ್ಕೆ ಮುಂಚೆ ಡಿಜಿಟಲೀಕರಣ ಮಾಡುವುದು ಜಿಲ್ಲಾಡಳಿತದ ಆದ್ಯತೆಯಾಗಿದೆ.

ಡಿಜಿಟಲೀಕರಣದ ನಂತರ ಜನರು ಸುಲಭವಾಗಿ ಈ ದಾಖಲೆಗಳನ್ನು ನಾಡ ಕಚೇರಿ ಇಲ್ಲವೇ ಗ್ರಾಮ ಒನ್ ಮೂಲಕ ಪಡೆಯಲು ಸಾಧ್ಯವಾಗಲಿದೆ. ನಂತರದಲ್ಲಿ ಜನರು ದಾಖಲೆಗಳಿಗಾಗಿ ಕಚೇರಿಗಳಿಗೆ ಅಲೆದಾಡುವುದೂ ತಪ್ಪಲಿದೆ. ಈಗಾಗಲೇ ಕೆಲ ಜಿಲ್ಲೆಗಳಲ್ಲಿ ಹಳೆಯ ದಾಖಲೆಗಳ ಡಿಜಿಟಲೀಕರಣಕ್ಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ದಾವಣಗೆರೆ ಸಹ ಅದೇ ಜಿಲ್ಲೆಗಳ ಸಾಲಿಗೆ ಸೇರ್ಪಡೆಯಾಗಲಿದೆ.

## 370ನೇ ವಿಧಿಗೆ ಅಂತಿಮ ತೆರೆ

**(1ನೇ ಪುಟದಿಂದ)** 2019ರಂದು ಕೇಂದ್ರ ಸರ್ಕಾರ 370ನೇ ವಿಧಿ ರದ್ದುಗೊಳಿಸುವ ಜೊತೆಗೆ, ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಪ್ರತ್ಯೇಕ ಗೊಳಿಸಿ ಎರಡನ್ನೂ ಕೇಂದ್ರಾಡಳಿತ ಪ್ರದೇಶ ಮಾಡಿತ್ತು.

ಲಡಾಖ್ ಅನ್ನು ಕೇಂದ್ರಾಡಳಿತ ಪ್ರದೇಶವಾಗಿ ಮುಂದುವರೆಸಲಾಗುವುದು. ಜಮ್ಮು ಮತ್ತು ಕಾಶ್ಮೀರವನ್ನು ರಾಜ್ಯವಾಗಿ ಮಾಡಲಾಗುವುದು ಎಂದು ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ ಹೇಳಿಕೆ ನೀಡಿದ್ದನ್ನೂ ಸಿ.ಜೆ.ಐ. ಚಂದ್ರಚೂಡ್ ಪರಿಗಣಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಸೆಪ್ಟೆಂಬರ್ 30, 2024ರ ಒಳಗೆ ಚುನಾವಣೆ ನಡೆಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾಧ್ಯವಾದಷ್ಟು ಬೇಗ ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನವೆಂಬರ್ 25, 1949ರಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಭಾರತದಲ್ಲಿ ಸೇರ್ಪಡೆ ಮಾಡಲಾ ಗಿತ್ತು. ನಂತರ ಜಮ್ಮು ಮತ್ತು ಕಾಶ್ಮೀರ ಯಾವುದೇ ಸಾರ್ವಭೌಮತ್ವ ಉಳಿಸಿಕೊಂಡಿಲ್ಲ. ಸಂವಿಧಾನದ 370ನೇ ವಿಧಿ ಅಸಮತೋಲನದ ಒಕ್ಕೂಟವಾದವೇ ಹೊರತು ಸಾರ್ವಭೌಮತ್ವ ಅಲ್ಲ ಎಂದೂ ನ್ಯಾಯಮೂರ್ತಿ ಚಂದ್ರಚೂಡ್ ಹೇಳಿದ್ದಾರೆ.

### ಐತಿಹಾಸಿಕ ಎಂದ ಪ್ರಧಾನಿ

**(1ನೇ ಪುಟದಿಂದ)** ಪ್ರಗತಿ ಹಾಗೂ ಅಭಿವೃದ್ಧಿ ಕಾರ್ಯಗಳಿಂದಾಗಿ ಜೀವನಕ್ಕೆ ಹೊಸ ಅರ್ಥ ದೊರೆತಿದೆ ಎಂದಿದ್ದಾರೆ.

370ನೇ ವಿಧಿ ರದ್ಧತಿಯ ಸಂಪೂರ್ಣ ಸಂವಿಧಾನಿಕ ಎಂಬುದಕ್ಕೆ ಸುಪ್ರೀಂ ಕೋರ್ಟ್ ತೀರ್ಪಿನ ಒಪ್ಪಿಗೆ ದೊರೆತಿದೆ ಎಂದೂ ಅವರು ತಿಳಿಸಿದ್ದಾರೆ.

ಪ್ರತ್ಯೇಕತಾವಾದ ಹಾಗೂ ಕಲ್ಲು ತೂರಾಟ ಈಗ ಮುಗಿದ ದಿನಗಳು. 370ನೇ ವಿಧಿ ರದ್ಧತಿ ಮೂಲಕ ಬಡವರು ಹಾಗೂ ದಮನಿತರಿಗೆ ಹಕ್ಕುಗಳನ್ನು ನೆಲೆ ನೀಡಲಾಗಿದೆ ಎಂದೂ ಅವರು ಹೇಳಿದ್ದಾರೆ.

## ಜಿಲ್ಲಾ ಮಟ್ಟದ 'ಸಿರಿಧಾನ್ಯ ಪಾಕ' ಸ್ಪರ್ಧೆ

ದಾವಣಗೆರೆ, ಡಿ. 11- ಅಂತರರಾಷ್ಟ್ರೀಯ ಮಟ್ಟದ ಸಿರಿಧಾನ್ಯ ಮತ್ತು ಸಾವಯವ ಮೇಳದ ಅಂಗವಾಗಿ ಇದೇ ದಿನಾಂಕ 14 ರಂದು ಬೆಳಿಗ್ಗೆ 11 ಗಂಟೆಗೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ಸಿರಿ ಧಾನ್ಯ ಪಾಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಪ್ರತಿ ಸ್ಪರ್ಧಿಗೆ ಒಂದೇ ಸಿಹಿ ಅಥವಾ ಖಾರ (ಸಸ್ಯಹಾರಿ ತಿನಿಸುಗಳು ಮಾತ್ರ) ತಯಾರಿಸುವ ಅವಕಾಶವಿರುತ್ತದೆ. ತಮ್ಮ ಅರ್ಜಿಯಲ್ಲಿ ನಮೂದಿಸಿದ ತಿನಿಸುಗಳನ್ನು ಮನೆಯಲ್ಲಿಯೇ ತಯಾರಿಸಿ, ದಿನಾಂಕ 14 ರಂದು ಪ್ರದರ್ಶಿಸಬೇಕು. ತಯಾರಿಸಿದ ತಿನಿಸುಗಳ ಪ್ರದರ್ಶನ ಬಳಸಿದ ಸಾಮಗ್ರಿಗಳು, ತೋರಿಕೆ ರುಚಿ, ಸುವಾಸನೆ, ಪೌಷ್ಠಿಕತೆ ಮೇಲೆ ಅಂತಿಮ ತೀರ್ಪು ಕೈಗೊಳ್ಳಲಾಗುವುದು. ಜಿಲ್ಲಾ ಮಟ್ಟಕ್ಕೆ ಪ್ರಥಮ ಬಹುಮಾನವಾಗಿ ಖಾರ ತಿನಿಸು ಅಥವಾ ಸಿಹಿ ತಿನಿಸಿಗೆ ಐದು ಸಾವಿರ ರೂ. ಬಹುಮಾನವಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದವರು ಇದೇ ದಿನಾಂಕ 23 ರಂದು ಬೆಂಗಳೂರಿನಲ್ಲಿ ಏರ್ಪಡಿಸಿರುವ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಬೇಕು.

ಸ್ಪರ್ಧೆಯಲ್ಲಿ ಜಿಲ್ಲೆಯ ಸಾರ್ವಜನಿಕರು ಭಾಗವಹಿಸಬಹುದು. ಆಸಕ್ತರು ನಾಡಿದ್ದು ದಿನಾಂಕ 13 ರೊಳಗಾಗಿ ಹತ್ತಿರದ ಕೃಷಿ ಇಲಾಖೆ ಕಚೇರಿ, ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 8277931208, 9964221906.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮಾವಾಸ್ಯೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕಾರ್ತಿಕ ಅಮಾವಾಸ್ಯೆ ಪ್ರಯುಕ್ತ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ಇಂದು ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ಸಂಜೆ 7 ಗಂಟೆಗೆ ಸಹಸ್ರ ದೀಪೋತ್ಸವ ಹಾಗೂ ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಆದಿಲಕ್ಷ್ಮಿ ಮತ್ತು ದಿ. ವಿ.ವಿ.ವಿ. ಸತ್ಯನಾರಾಯಣ, ಶ್ರೀಮತಿ ಶ್ರೀದೇವಿ, ಶ್ರೀ ಶ್ರೀನಿವಾಸ ರಾಜು, ಶ್ರೀಮತಿ ಶ್ರೀಲಕ್ಷ್ಮಿ, ಶ್ರೀ ವೀರಭದ್ರರಾವ್ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ಅಪಘಾತದಲ್ಲಿ ಅಪರಿಚಿತನ ಸಾವು : ಪತ್ತೆಗೆ ಕರೆ



ಚನ್ನಗಿರಿ,ಡಿ. 11- ತಾಲ್ಲೂಕಿನ ಮತ್ತಿ ಗ್ರಾಮದ ಬಳಿ ತ್ಯಾವಣಿಗೆ ಕಡೆಗೆ ರಸ್ತೆಯ ಮೂಲಕ ನಡೆದುಕೊಂಡು ಹೋಗುತ್ತಿದ್ದ 55 ರಿಂದ 60 ವರ್ಷದ ಅನಾಮಧೇಯ ವ್ಯಕ್ತಿಗೆ ದಾವಣಗೆರೆ ಕಡೆಯಿಂದ ಬರುತ್ತಿದ್ದ ಬೈಕ್ ಸವಾರನೊಬ್ಬ ಡಿಕ್ಕಿಪಡಿಸಿದ ಪರಿಣಾಮ ಆತ ಗಾಯಗೊಂಡಿದ್ದ. ನಗರದ ಚಿಗಟೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಆ ವ್ಯಕ್ತಿ ಮೊನ್ನೆ ಮೃತಪಟ್ಟಿದ್ದಾನೆ.

ಕೋಲು ಮುಖ, ತೆಳ್ಳನೆಯ ಮೈಕಟ್ಟು ಹಾಗೂ ಗೋಧಿ ಬಣ್ಣ ಹೊಂದಿದ್ದು, ಬಿಳಿ ಮತ್ತು ನೀಲಿ ಬಣ್ಣಗಳ ದಪ್ಪಗೆರೆಗಳಿರುವ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಸಂಬಂಧಪಟ್ಟವರು ಹದಡಿ ಪೊಲೀಸ್ ಠಾಣೆ (08192-218405) ಯನ್ನು ಸಂಪರ್ಕಿಸಬಹುದು.



ಇಂದು ಜನ್ಮದಿನದ ಸಂಭ್ರಮದಲ್ಲಿರುವ
ಕ್ರಿಯಾಶೀಲ, ದಿಟ್ಟ ಹೋರಾಟಗಾರ, ಹಿಂದೂ ಯುವಕರ ಕಣ್ಮಣಿ,
ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ




ಶುಭಕೋರುವವರು :- ಶ್ರೀ ರಾಜನಹಳ್ಳಿ ಶಿವಕುಮಾರ್ ಸ್ನೇಹ ಬಳಗ



**ಹನ್ನೊಂದನೇ ವರ್ಷದ ಪುಣ್ಯಸ್ಮರಣೆ**



**ದಿ. ಹಾಸಬಾವಿ ಜೆ. ವಿಶ್ವನಾಥ್ (ಈಶಣ್ಣ)**

ನೀವು ನಮ್ಮನ್ನಗಲಿ
ಇಂದಿಗೆ
ಹನ್ನೊಂದು ವರ್ಷಗಳಾದವು.
ಸದಾ ನಿಮ್ಮ
ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿರುವ
ಹಾಗೂ ಸದಾ ನಿಮ್ಮ
ಸ್ಮರಣೆಯಲ್ಲಿರುವ,

ಪತ್ನಿ : ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳು, ಸಹೋದರರು
ಹಾಗೂ ಹಾಸಬಾವಿ ವಂಶಸ್ಥರು, ದಾವಣಗೆರೆ.


**ಸವಿತಾ ಸಮಾಜದ**
**ಆತ್ಮಕೂರು ಅಂಜಿನಪ್ಪ ನಿಧನ**



ದಾವಣಗೆರೆ ನಗರದ ಎಸ್.ಓ.ಜಿ, ಕಾಲೋನಿ ವಾಸಿ ಆತ್ಮಕೂರು ಅಂಜಿನಪ್ಪ (63) ಇವರು ದಿನಾಂಕ : 11.12.2023ರ ಮಧ್ಯಾಹ್ನ 12.45ಕ್ಕೆ ನಿಧನರಾಗಿರುತ್ತಾರೆ. ತಾಯಿ, ಪತ್ನಿ, ಸಹೋದರ, ಸಹೋದರಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಭಾವಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆ ದಿನಾಂಕ : 12.12.2023ರ ಮಧ್ಯಾಹ್ನ 12.00 ಗಂಟೆಗೆ ನಗರದ ಬೂದಾಳ್ ರಸ್ತೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಗುಣಮಟ್ಟದ ಸಮವಸ್ತ್ರ

**(1ನೇ ಪುಟದಿಂದ)** ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 55,43,828 ವಿದ್ಯಾರ್ಥಿಗಳಿಗೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಉಚಿತವಾಗಿ ಪಠ್ಯಪುಸ್ತಕಗಳು ಹಾಗೂ 45,45,749 ವಿದ್ಯಾರ್ಥಿ ಗಳಿಗೆ ಸಮವಸ್ತ್ರ ಹಾಗೂ ಶೂ ಮತ್ತು ಸಾಕ್ಸ್‌ಗಳನ್ನು ವಿತರಿಸಲಾಗಿದೆ. 2023-24ನೇ ಸಾಲಿನಲ್ಲಿ ವಿದ್ಯಾ ವಿಕಾಸ ಯೋಜನೆಯಡಿ ಯಲ್ಲಿ 55,43,828 ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ 4,47,17,051 ಪಠ್ಯಪುಸ್ತಕಗಳನ್ನು ಜನವರಿ 2023 ರಿಂದ ಮಾರ್ಚ್ 2023ರವರೆಗೆ ಸರಬರಾಜು ಮಾಡಲಾಗಿದ್ದು ವಿದ್ಯಾರ್ಥಿಗಳಿಗೆ ಶಾಲೆಯ ಪ್ರಾರಂಭದ ದಿನದಂದು ವಿತರಿಸಲಾಗಿದೆ ಎಂದು ಹೇಳಿದರು.

KA/SK/CTA-275/2021-2023. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಮಧ್ಯ ಪ್ರದೇಶದ ಮುಖ್ಯಮಂತ್ರಿಯಾಗಿ ಮೋಹನ್ ಯಾದವ್ ಆಯ್ಕೆ**
ಭೋಪಾಲ್ : ಮಧ್ಯ ಪ್ರದೇಶದ ನೂತನ ಮುಖ್ಯಮಂತ್ರಿಯಾಗಿ ಮೋಹನ್ ಯಾದವ್ ಅವರನ್ನು ಬಿಜೆಪಿ ಆಯ್ಕೆ ಮಾಡಿದೆ. ಯಾದವ್ ಸರ್ಕಾರ ರಚಿಸಲು ರಾಜ್ಯಪಾಲ ಮಂಗುಭಾಯಿ ಪಟೇಲ್ ಆಹ್ವಾನ ನೀಡಿದ್ದಾರೆ. ಯಾದವ್ ಮೂರು ಬಾರಿ ಶಾಸಕರಾದ ಅನುಭವ ಹೊಂದಿದ್ದಾರೆ. ಅವರು ಒ.ಬಿ.ಸಿ. ಸಮುದಾಯದ ಪ್ರಮುಖ ನಾಯಕರೂ ಆಗಿದ್ದಾರೆ.

**ಜಾರ್ಖಂಡ್ ಮುಖ್ಯಮಂತ್ರಿಗೆ ಇ.ಡಿ. ಸಮನ್ಸ್**
ರಾಂಚಿ : ಜಮೀನು ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯ ಮರು ಸಮನ್ಸ್ ಕಳಿಸಿದೆ. ಡಿಸೆಂಬರ್ 12ರಂದು ವಿಚಾರಣೆಗೆ ಬರುವಂತೆ ತಿಳಿಸಲಾಗಿದೆ. ಇದುವರೆಗೂ ಸೊರೇನ್‌ಗೆ ಆರು ಬಾರಿ ನೋಟಿಸ್ ಕಳಿಸಲಾಗಿದೆ. ಸಮನ್ಸ್‌ಗೆ ತಡೆ ಕೋರಿ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ದಾಖಲಿಸಿದ ಅರ್ಜಿಗಳನ್ನು ತಳ್ಳಿ ಹಾಕಲಾಗಿದೆ.

**ಸಾಲ ಮನ್ನಾ ಜಾಹೀರಾತುಗಳ ಬಗ್ಗೆ ಆರ್.ಬಿ.ಐ. ಎಚ್ಚರಿಕೆ**
ಮುಂಬೈ : ಸಾಲ ಮನ್ನಾ ಮಾಡುವುದಾಗಿ ಮುದ್ರಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ದಾರಿ ತಪ್ಪಿಸುವ ಜಾಹೀರಾತುಗಳಿಗೆ ಬಲಿಯಾಗದಂತೆ ರಿಸರ್ವ್ ಬ್ಯಾಂಕ್ ಎಚ್ಚರಿಕೆ ನೀಡಿದೆ. ಸಾಲ ಮನ್ನಾ ಮಾಡುವುದಾಗಿ ಅಭಿಯಾನ ನಡೆಸುತ್ತಿರುವುದು ಕಂಡು ಬಂದಿದೆ, ಇವರು ಯಾವುದೇ ಅಧಿಕೃತ ಮಾನ್ಯತೆ ಇಲ್ಲದೇ ಸಾಲ ಮನ್ನಾ ಆಗಿರುವ ಪ್ರಮಾಣ ಪತ್ರ ನೀಡುತ್ತಿದ್ದಾರೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

**ಐ.ಎಫ್.ಎ. ಮಾಜಿ ಕಾರ್ಯದರ್ಶಿ ಮೇಲೆ ಐ.ಟಿ. ದಾಳಿ**
ಕೊಲ್ಕೊತಾ : ವಿದೇಶಿ ಮದ್ಯ ವ್ಯಾಪಾರದ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯು ಭಾರತೀಯ ಫುಟ್‌ಬಾಲ್ ಒಕ್ಕೂಟದ (ಐ.ಎಫ್.ಎ.) ಮಾಜಿ ಕಾರ್ಯದರ್ಶಿ ಉತ್ಪಲ್ ಗಂಗೂಲಿ ನಿವಾಸಗಳ ಮೇಲೆ ದಾಳಿ ನಡೆಸಿದೆ. ಗಂಗೂಲಿ ಅವರು 12 ವರ್ಷಗಳ ಕಾಲ ಐ.ಎಫ್.ಎ. ಕಾರ್ಯದರ್ಶಿಯಾಗಿದ್ದರು. 2019ರಲ್ಲಿ ಅವರು ಅಧಿಕಾರದಿಂದ ಕೆಳಗಿಳಿದಿದ್ದರು.

**2020-21ರ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಇನ್ನೊಂದು ಅವಕಾಶ**
ನವದೆಹಲಿ : 2020-21ರ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆದ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳು, ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಾಧ್ಯವಾಗದಿದ್ದಲ್ಲಿ, ಅವರಿಗೆ ಇನ್ನೊಂದು ಅವಕಾಶ ನೀಡುವುದಾಗಿ ರಾಷ್ಟ್ರೀಯ ವೈದ್ಯಕೀಯ ಆಯೋಗ ತಿಳಿಸಿದೆ. ಈ ವರ್ಷದ ತಂಡ ಕೊರೊನಾದಿಂದ ಪ್ರಭಾವಿತವಾಗಿದ್ದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಜಮ್ಮು ಮತ್ತು ಕಾಶ್ಮೀರದ ಎರಡು ಮಸೂದೆಗಳಿಗೆ ರಾಜ್ಯಸಭೆ ಒಪ್ಪಿಗೆ**
ನವದೆಹಲಿ : ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರ ಪುನರ್ವಿಂಗಡಣೆ ಹಾಗೂ ಕ್ಷೇತ್ರಗಳ ಮೀಸಲಾತಿಗೆ ಸಂಬಂಧಿಸಿದ ಎರಡು ಮಸೂದೆಗಳಿಗೆ ರಾಜ್ಯಸಭೆ ಒಪ್ಪಿಗೆ ನೀಡಿದೆ. ಈ ಮಸೂದೆಗಳಿಗೆ ಲೋಕಸಭೆ ಈಗಾಗಲೇ ಒಪ್ಪಿಗೆ ನೀಡಿದೆ.

## ಸಾಲ ಮರು ಪಾವತಿಗೆ ಒತ್ತಡ ಬೇಡ

**(1ನೇ ಪುಟದಿಂದ)** ಎ.ಪಿ.ಎಂ.ಸಿ ಕಾಯಿದೆ ತಿದ್ದುಪಡಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯಾಪ್ತಿಗೆ ಬರಲಿದ್ದು ಈಗಾಗಲೇ ಆ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದರು.

ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಪರಿಹಾರ ಹೆಚ್ಚಳದ ಬಗ್ಗೆಯೂ ಸರ್ಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಕೃಷಿ ಸಚಿವರು ಹೇಳಿದರು.

ಕಬ್ಬು ಬೆಳೆಗಾರರ ಸಮಸ್ಯೆ ಸೇರಿದಂತೆ ರೈತರ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಕ್ರಮವಹಿಸಲಾಗುವುದು ಎಂದು ಎನ್. ಚಲುವರಾಯಸ್ವಾಮಿ ಹೇಳಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳು ಕೇವಲ ಮಹಿಳಾ ಕೇಂದ್ರಿತವಾಗಿರದೆ ಗ್ರಾಮೀಣ ರೈತರು ಹಾಗೂ ಬಡಜನರ ಏಳಿಗೆಯ ಆಶಯದೊಂದಿಗೆ ರೂಪಿಸಲಾಗಿದೆ ಎಂದು ಸಚಿವರು ಮನವರಿಕೆ ಮಾಡಿಕೊಟ್ಟರು.

# ರಸ್ತೆ ಅಪಘಾತ: ಪ್ರತಿಭಟನೆಗೆ ಹೊರಟಿದ್ದವರು ಆಸ್ಪತ್ರೆಗೆ


ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಗಾಯಾಗಳುಗಳನ್ನು ವಿಚಾರಿಸಿದರು.


ಹೆದ್ದಾರಿಯಲ್ಲಿ ಸರಣಿ ಅಪಘಾತಗಳಿಗೆ ಕಾರಣವಾಗಿದ್ದ ಹಂಪ್ಸ್‌ಗಳನ್ನು ಸೋಮವಾರ ಪೊಲೀಸರು ತೆರವುಗೊಳಿಸಿದರು.

**ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಬೆಳಗಾವಿಯಲ್ಲಿ ಪ್ರತಿಭಟಿಸಲು ಹೊರಟಿದ್ದರು.**

**ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಹೆದ್ದಾರಿಯಲ್ಲಿ ಬಸ್ ಅಪಘಾತ**

**18 ಜನರಿಗೆ ಗಾಯ, ಜಿಲ್ಲಾಸ್ಪತ್ರೆಗೆ ದಾಖಲು**

ದಾವಣಗೆರೆ, ಡಿ.11- ನಗರದ ಹೊರ ವಲಯದಲ್ಲಿನ ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಹೆದ್ದಾರಿಯಲ್ಲಿ ಸೋಮವಾರ ಬೆಳಗಿನ ಜಾವ ಲಾರಿಗೆ ಬಸ್ ಡಿಕ್ಕಿ ಹೊಡೆದು 18 ಮಂದಿ ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ.

ಮಾದಿಗ ದಂಡೋರ ಜಾಗೃತಿ ಸಮಿತಿಯ ಬೆಂಗಳೂರು, ಚಿಕ್ಕಬಳ್ಳಾಪುರ, ಚಿಂತಾಮಣಿ ಪದಾಧಿಕಾರಿಗಳು ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಬೆಳಗಾವಿ ಅಧಿವೇಶನದ ವೇಳೆ ಪ್ರತಿಭಟಿಸುವ ಸಲುವಾಗಿ ಈ ಬಸ್‌ನಲ್ಲಿ ಬೆಳಗಾವಿಗೆ ತೆರಳುತ್ತಿದ್ದರು.

ಡಿಕ್ಕಿ ರಭಸಕ್ಕೆ ಬಸ್ ಮುಂಭಾಗ ಸಂಪೂರ್ಣ ನಜ್ಜು-ಗುಜ್ಜಾಗಿದೆ. ಗಾಯಗೊಂಡಿದ್ದವರನ್ನು ದಾವಣಗೆರೆ ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿದೆ. ದಾವಣಗೆರೆ ಉತ್ತರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಭೀಕರ ಅಪಘಾತದಲ್ಲಿ ಬಸ್ಸಿನ ಮುಂಭಾಗ ಛಿದ್ರಛಿದ್ರಗೊಂಡು, ಡ್ರೈವರ್ ಸೀಟ್ ಪೂರ್ತಿ ನಜ್ಜುಗುಜ್ಜಾಗಿತ್ತು. ಆದರೆ ಡ್ರೈವರ್ ಸೀಟ್‌ನಲ್ಲಿ ಅಳವಡಿಸಿದ್ದ ಡಾ. ರಾಜ್‌ಕುಮಾರ್ ಫೋಟೋಗೆ ಯಾವುದೇ ಹಾನಿಯಾಗದೆ ಭದ್ರವಾಗಿತ್ತು.

**ಜಿಲ್ಲಾಧಿಕಾರಿ ಭೇಟಿ:** ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳ ಯೋಗ ಕ್ಷೇಮ ವಿಚಾರಿಸಿದರು.

ಈ ವೇಳೆ ಗಾಯಾಳುಗಳಿಗೆ ಸೂಕ್ತವಾದ ಚಿಕಿತ್ಸೆ ನೀಡಲು ಸೂಚನೆ ನೀಡಿದ ಅವರು ಇವರಿಗೆ ಯಾವುದೇ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದ್ದಲ್ಲಿ ಕೂಡಲೇ ನೀಡಲು ತಿಳಿಸಿದರು.

ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ ಹಾಗೂ ವಿವಿಧ ಮುಖಂಡರುಗಳು ಉಪಸ್ಥಿತರಿದ್ದರು.

**ಅಪಘಾತಕ್ಕೆ ಹಂಪ್ಸ್ ಕಾರಣ:** ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಸೂಕ್ತ ಸ್ಥಳದಲ್ಲಿ ಹಂಪ್ಸ್ ನಿರ್ಮಿಸದೇ ಇರುವುದೇ ಸರಣಿ ಅಪಘಾತಗಳಿಗೆ ಕಾರಣ ಎಂದು ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಆರೋಪಿಸಿದ್ದಾರೆ.

ಒಂದು ದಿನದ ಹಿಂದಷ್ಟೇ ಟ್ರ್ಯಾಕ್ಟರ್ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿದ್ದರು. ಅದೇ ಸ್ಥಳದಲ್ಲಿ ಮತ್ತೆ ಲಾರಿ ಹಾಗೂ ಬಸ್ ಡಿಕ್ಕಿಯಾಗಿದೆ.

ಹೆದ್ದಾರಿಯಲ್ಲಿ 2 ಸ್ಟ್ರೀಟ್ ಲೈಟ್‌ಗಳ ಮಧ್ಯಭಾಗದಲ್ಲಿ ಹಂಪ್ಸ್ ಅಳವಡಿಸಲಾಗಿತ್ತು. ಇದು ಅಪಘಾತಕ್ಕೆ ಕಾರಣವಾಗಿತ್ತು. ಇದೀಗ ಪೊಲೀಸ್ ಇಲಾಖೆ ಹಂಪ್ಸ್ ತೆರವುಗೊಳಿಸಿದ್ದು ಅಭಿನಂದನಾರ್ಹ ಎಂದವರು ಹೇಳಿದ್ದಾರೆ.

ಹೆದ್ದಾರಿಯಲ್ಲಿ ವೇಗಮಿತಿ ಪಾಲನೆಯಾಗುತ್ತಿಲ್ಲ. ಮಿತಿ ಮೀರಿದ ವೇಗದಲ್ಲಿ ಬರುವ ವಾಹನಗಳಿಗೆ ದಂಡ ವಿಧಿಸುವ ಪ್ರಕ್ರಿಯೆ ಹೆಚ್ಚಾಗಬೇಕು ಎಂದೂ ಶ್ರೀಕಾಂತ್ ಒತ್ತಾಯಿಸಿದ್ದಾರೆ.

# ಎಸ್ಸೆನ್ ಮನೆ ಸ್ಮಾರಕಕ್ಕೆ ವಿಳಂಬ ಧೋರಣೆ ಏಕೆ



**ಮೋಹನ್‌ಕುಮಾರ್ ಕೊಂಡಜ್ಜಿ ಪ್ರಶ್ನೆ**

ದಾವಣಗೆರೆ, ಡಿ.11- ಮಾಜಿ ಮುಖ್ಯಮಂತ್ರಿ ದಿ. ಎಸ್. ನಿಜಲಿಂಗಪ್ಪನವರ 121ನೇ ಜನ್ಮ ದಿನದಂದು ವಿಧಾನಸೌಧದ ಆವರಣದಲ್ಲಿ ನಿನ್ನೆ ಜರುಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಸ್ಸೆನ್ ಭಾವಚಿತ್ರ ಮತ್ತು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ವಿಶ್ರಾಂತ ನ್ಯಾಯಾಧೀಶರಾದ ಶಿವರಾಜ್ ಪಾಟೀಲ್, ಎಸ್.ಜಿ ಮಂಜುನಾಥ್, ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್ ಮತ್ತು ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ಮೋಹನ್‌ಕುಮಾರ್ ಕೊಂಡಜ್ಜಿ ಅವರು, ಚಿತ್ರದುರ್ಗದಲ್ಲಿರುವ ನಿಜಲಿಂಗಪ್ಪರ ಮನೆಯನ್ನು ಸರ್ಕಾರ ವಹಿಸಿಕೊಂಡು ಸ್ಮಾರಕ ಮಾಡಲು ವಿಳಂಬ ನೀತಿ ಅನುಸರಿಸುತ್ತಿರುವುದು ಏಕೆ? ಎಂದು ಪ್ರಶ್ನಿಸಿದ್ದಾರೆ. ಇದಕ್ಕಾಗಿ ಆಯವ್ಯಯದಲ್ಲಿ 5 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ, ಆದಾಗ್ಯೂ ಚಿತ್ರದುರ್ಗದ ಜಿಲ್ಲಾಡಳಿತದ ನಿರಾಸಕ್ತಿಯೋ ಏನೋ ಕಳೆದ ಮೂರು ವರ್ಷಗಳಿಂದ ಕಡತ ದೂಳಿಡಿದಿದೆ, ಯಾರೂ ಅದರ ಬಗ್ಗೆ ಆಸಕ್ತಿ ತೋರುತ್ತಿಲ್ಲ, ಏನಾದರೂ ಸಮಸ್ಯೆಗಳಿದ್ದರೆ, ಬಗೆಹರಿಸಲು ಕನಿಷ್ಟ ಸಭೆಯನ್ನೂ ಕರೆದಿಲ್ಲ. ಇದೆಂಥ ಆಡಳಿತದ ದುರವಸ್ಥೆ ಎಂದೂ ಅವರು ತೀಕ್ಷ್ಣವಾಗಿಯೇ ಪ್ರಶ್ನಿಸಿದ್ದಾರೆ.

ಅಮೆರಿಕಾದಲ್ಲಿರುವ ನಿಜಲಿಂಗಪ್ಪನವರ ಮಗ ಮತ್ತು ಮೊಮ್ಮಗ ಆಸ್ತಿಯನ್ನು ಸರ್ಕಾರದ ಸುಪರ್ದಿಗೆ ವಹಿಸಲು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸಮಯ ನಿಗದಿ ಪಡಿಸಲಾಗಿತ್ತು. ಅಮೆರಿಕಾದಿಂದ ಮಗ, ಮೊಮ್ಮಗ ಕೂಡಾ ಬಂದಿದ್ದರೂ ಕೊನೇ ಗಳಿಗೆಯಲ್ಲಿ ಆಸ್ತಿ ವರ್ಗಾವಣೆ ವಿಧಾನ ರದ್ದು ಮಾಡಲಾಯಿತು. ಇದನ್ನು ಯಾರೂ ಅಷ್ಟು ಗಂಭೀರವಾಗಿ ಪರಿಗಣಿಸದೇ ಇದ್ದದ್ದು ದುರದೃಷ್ಟಕರ. ಹಾಗಾಗಿ ಈಗಲಾದರೂ ಚಿತ್ರದುರ್ಗ ಜಿಲ್ಲಾಧಿಕಾರಿಗಳು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಸಭೆ ಕರೆದು ತೀರ್ಮಾನ ತೆಗೆದುಕೊಳ್ಳುವಲ್ಲಿ ವಿಶೇಷ ಆಸಕ್ತಿ ವಹಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಲ್ಲಿ ಮೋಹನ್‌ಕುಮಾರ್ ಕೊಂಡಜ್ಜಿ ಮನವಿ ಮಾಡಿದ್ದಾರೆ.

## ಕಾಶ್ಮೀರಿ ಪಂಡಿತರದ್ದು ಸ್ವಯಂ ಪ್ರೇರಿತ ವಲಸೆಯಲ್ಲ : ನ್ಯಾಯಮೂರ್ತಿ ಕೌಲ್

ನವದೆಹಲಿ, ಡಿ. 11 – ಜಮ್ಮು ಮತ್ತು ಕಾಶ್ಮೀರದಲ್ಲಿ 1980ರಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಕಾಶ್ಮೀರಿ ಪಂಡಿತರು ರಾಜ್ಯದಿಂದ ವಲಸೆ ಹೋಗಿದ್ದರು. ಇದು ಸ್ವಯಂ ಪ್ರೇರಿತ ವಲಸೆಯಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಹೇಳಿದ್ದಾರೆ.

ಸಂವಿಧಾನದ 370ನೇ ವಿಧಿ ರದ್ದುಗೊಳಿಸುವ ಕೇಂದ್ರದ ಕ್ರಮವನ್ನು ಎತ್ತಿ ಹಿಡಿದ ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠದ ಭಾಗವಾಗಿ ನ್ಯಾಯಮೂರ್ತಿ ಕೌಲ್ ಈ ನಿಲುವು ತಿಳಿಸಿದ್ದಾರೆ.

121 ಪುಟಗಳ ಪ್ರತ್ಯೇಕ, ಆದರೆ ಸಹಮತದ ತೀರ್ಪು ಪ್ರಕಟಿಸಿರುವ ನ್ಯಾಯಮೂರ್ತಿ ಕೌಲ್, 1980ರಲ್ಲಿ ಉಂಟಾದ ಪರಿಸ್ಥಿತಿಯನ್ನು ಸರಿಯಾಗಿ ಬಗೆಹರಿಸಿರಲಿಲ್ಲ.

ಇದರಿಂದಾಗಿ ರಾಜ್ಯದ ಒಂದು ವರ್ಗದ ಜನರು 1989-90ರಲ್ಲಿ ವಲಸೆ ಹೋದರು. ತಮ್ಮ ಮನೆ ಹಾಗೂ ಮನಸ್ಸುಗಳನ್ನು ಬಿಟ್ಟು ಬಂದವರಿಗೆ ಯಾವುದೇ ಪರಿಹಾರ ಸಿಗಲಿಲ್ಲ. ಆಗ ನಡೆದಿದ್ದು ಸ್ವಯಂ ಪ್ರೇರಿತ ವಲಸೆಯಲ್ಲ ಎಂದು ನ್ಯಾಯಮೂರ್ತಿ ಕೌಲ್ ಹೇಳಿದರು.

ಪರಿಸ್ಥಿತಿ ಎಷ್ಟು ತೀವ್ರವಾಯಿತು ಎಂದರೆ, ಭಾರತದ ಸಾರ್ವಭೌಮತ್ವಕ್ಕೆ ಅಪಾಯವಾಯಿತು ಹಾಗೂ ಸೈನ್ಯವನ್ನು ಕರೆಸಲಾಯಿತು. ಸೈನ್ಯ ಇರುವುದು ದೇಶದ ಶತ್ರುಗಳನ್ನು ಎದುರಿಸಲಿಕ್ಕೇ ಹೊರತು, ದೇಶದೊಳಗಿನ ಕಾನೂನು ವ್ಯವಸ್ಥೆ ಕಾಯ್ದುಕೊಳ್ಳಲು ಅಲ್ಲ. ಆದರೆ, ನಾವು ವಿಚಿತ್ರ ಸಮಯದಲ್ಲಿದ್ದೇವೆ ಎಂದು ನ್ಯಾಯಮೂರ್ತಿ ಕೌಲ್ ಹೇಳಿದರು.




**SERVICES**
• EC • Khata Extract • Khata Change • Building Licence • Property tax • Site Merger and Bifurcation • Missed - Alenation Copy • Missed - Layout Plan • Family Tree (ವಂಶವೃಕ್ಷ) • Marriage Certificate • Cast & Income Certificate • Loans - ALL BANKS Site, Building & Construction • Property Registration, Gift Deed, Mortgage and Reconveyance.
Contact : Kiran Boosnur
98440 63409

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ 30x40, 30x40 West ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, ವಿನಾಯಕ ಬಡಾವಣೆಯಲ್ಲಿ 23x44 North-West Corner, 30x28 North, 40x50 South.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಲಾಡ್ಜ್‌ಗೆ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ಸೂಪರ್‌ವೈಸರ್ ಮತ್ತು ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

**ಬೇಕಾಗಿದ್ದಾರೆ**
ಟ್ಯಾಲಿಯಲ್ಲಿ ಅನುಭವವಿರುವವರು ಬೇಕಾಗಿದ್ದಾರೆ. ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಮೊಟಲ್ ಆಯಿಲ್ ಮಾರ್ಕೆಟಿಂಗ್ ಮಾಡಲು ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸಂಪರ್ಕಿಸಿ :
98866-26868, 99801-55612

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ
70x62 Corner, 40x62 West, 30x62 Corner, 30x50 East, 30x52 North, 40x40 South.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಸಮೀಪ ರಾಷ್ಟ್ರೀಯ ಹೆದ್ದಾರಿ ಹತ್ತಿರ ಕೊಗ್ಗನೂರು ಬಳಿ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99000 12266

**ಕಂಪ್ಯೂಟರ್ ಆಪರೇಟರ್, ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಶಾಮನೂರು ಶಾಪೆ
ಮೊ. 98803-10567

**ಸೈಟ್ ಮಾರಾಟಕ್ಕೆ (KHB)**
(for immediately register only)
ಕರ್ನಾಟಕ ಗೃಹ ಮಂಡಳಿ (ಕಮೀಷನ್ +ರಿಜಿಸ್ಟರ್ ಸೇರಿ) 20x30 ಪೂರ್ವ (16 ಲಕ್ಷ) 30x40 ದಕ್ಷಿಣ (36 ಲಕ್ಷ) 40x60 ದಕ್ಷಿಣ (70 ಲಕ್ಷ)
ಕಿರಣ್ ಭೂಸನೂರ್ (ಏಜೆಂಟ್)
98440 63409
GOOD LOCATION

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
S.N Enterprises
60 feet Road, Nituvalli, Davanagere
Office work, Field work, All Round work.
Boys Salary : 13,000/-
72592 66469
Girls Salary : 9,000/-
85489 01454

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**BUSINESS**
Cure by nature with FIR unique products & business opportunity for
Part time & full time
98444 61113

**FOR RENT**
2nd Floor 1000 Sq.ft with Aluminium partition for office use.
P.J Extension 8th Main Road, Mirza Plaza, Davanagere. Contact No.
99641 10810

**ಜಂಗಮ ವಧು ಬೇಕಾಗಿದೆ**
ಲಿಂಗಾಯತ ಜಂಗಮ 29 ವರ್ಷದ BE-MS ಜರ್ಮನಿಯಲ್ಲಿ ಕೆಲಸದಲ್ಲಿರುವ ಒಬ್ಬನೇ ಮಗ, ಒಳ್ಳೆಯ ಮನೆತನದ ವರನಿಗೆ ಸೂಕ್ತ BE ಪೂರೈಸಿದ ವಧು ಬೇಕಾಗಿದೆ.
98807 29108

**WANTED**
• SALESMAN
• SALES GIRLS
• HELPERS
CONTACT: GANGAVATHI SILK SAREE CENTER
BINNY COMPANY ROAD, DAVANGERE - 577001

**ಕಾರುಗಳು ಮಾರಾಟಕ್ಕಿವೆ**
2017 WAGON-R VXI
2013 TOYOTA INNOVA (V)
2016 HYUNDAI CRETA
DAIVIK IYANAHALLI
99456 43223

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ. ಸಂಪರ್ಕಿಸಿ :
8088282434, 8971593915

**WANTED**
Pharmacist
fulltime with QP Retail Store,
Davangere.
90360 59698

**CHANGE OF NAME**
I, **Ashwini G.R** W/o S.G Ramesh, previously called **ASHWINI D.S** (Old Name), resdinig at #75/5, Naganuru Road, Near SAR High School Shamanuru, Davanagere 577004 have changed my name as **ASHWINI G.R** (New Name) vide affidavit dated 08.12.2023 Sworn before Notary B.G Revansiddappa, Davnagaere. Henceforth all my transactions & dealings will be in my new name **ASWHINI G.R.**

**ಮನೆ ಬಾಡಿಗೆಗೆ ಇದೆ**
ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ, 24 ಗಂಟೆ ಬೋರ್‌ವೆಲ್ ಮತ್ತು ಕಾರ್ಪೋರೇಷನ್ ನೀರಿನ ಸೌಲಭ್ಯವುಳ್ಳ ಮನೆ ಇದೆ.
ವಿಳಾಸ : ಡೋ. ನಂ. 1325/16, ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, ಕೆಎಸ್‌ಎಸ್ ಕಾಲೇಜು ಹತ್ತಿರ, ದಾವಣಗೆರೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ.)
87928 59141, 70198 75783

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಆಯಾ ಬೇಕಾಗಿದ್ದಾರೆ. ಸಂಪರ್ಕಿಸಿ.
ವಿದ್ಯಾನಗರ, ದಾವಣಗೆರೆ.
98800 30171

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.





ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಮಾರಾಟಕ್ಕಿದೆ**
ಮಿಟ್ಲಕಟ್ಟೆಯಲ್ಲಿ 19 ಗುಂಟೆ ಗೋಡೌನ್ ಸಹಿತ ಜಾಗ ಮಾರಾಟಕ್ಕಿದೆ. ದಾವಣಗೆರೆ, ಮಲೇಬೆನ್ನೂರು ರೋಡ್.
91641 29236

**ಶಕೀರಾ ಬ್ಯೂಟಿ ಪಾರ್ಲರ್/ಸಲೂನ್**
Shakeera Beauty Parlour/Salon
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸಕ್ಕಾಗಿ ಬೇಕಾಗಿದ್ದಾರೆ. ಬ್ಯೂಟಿಷಿಯನ್ - 2, ಸಹಾಯಕರು - 2
ಸಂಪರ್ಕಿಸಿ : 93420 19013
#741/4, 10th Main, P.J. Extension Opposite Modi Compound, Davanagere-2.

**ಮನೆ ಬಾಡಿಗೆಗಿದೆ**
ಎಸ್.ಎಸ್. ಲೇ ಔಟ್, ಎ ಬ್ಲಾಕ್, ಎಂಬಿಎ ಕಾಲೇಜು ಹತ್ತಿರ, ಗ್ರೌಂಡ್ ಫ್ಲೋರ್, ಡಬಲ್ ಬೆಡ್ ರೂಂ, ಬೋರ್/ ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ.
90363 38415, 88925 30220

**ಬೇಕಾಗಿದ್ದಾರೆ**
ಡಾಟಾ ಎಂಟ್ರಿ ಆಪರೇಟರ್ ಬೇಕಾಗಿದ್ದಾರೆ. ಆನ್‌ಲೈನ್ ಅಪ್ಲಿಕೇಶನ್ ಹಾಕಲು ಇಂಗ್ಲಿಷ್, ಕನ್ನಡ ಟೈಪಿಂಗ್ ತಿಳಿದಿರಬೇಕು.
93802 29199, 98803 34729

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628





# ಹಿರೇಕಲ್ಮಠದಲ್ಲಿ ಇಂದು ಅಮಾವಾಸ್ಯೆ, ಲಕ್ಷ ದೀಪೋತ್ಸವ



ಹೊನ್ನಾಳಿ

ಹೊನ್ನಾಳಿ, ಡಿ.11-ಹಿರೇಕಲ್ಮಠದಲ್ಲಿ ನಾಳೆ ದಿನಾಂಕ 12ರ ಮಂಗಳವಾರ ಕಾರ್ತಿಕ ಮಾಸದ ಚಟ್ಟಿ ಅಮಾವಾಸ್ಯೆ ದಿನದಂದು ಮಹಾಪೂಜೆ, ಕದಳಿ ಕಾರ್ತಿಕ ಲಕ್ಷ ದೀಪೋತ್ಸವ, ಶ್ರೀ ಗುರು ಚನ್ನೇಶ್ವರ ಬೆಳ್ಳಿ ರಥೋತ್ಸವ, ಧರ್ಮಸಭೆ ಹಾಗೂ ಸಂಸ್ಕೃತಿ-ಸಂಸ್ಕಾರ ಕಾರ್ಯಕ್ರಮಗಳು ಜರುಗುವವು ಎಂದು ಹಿರೇಕಲ್ಮಠದ ಶ್ರೀ ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಹಿರೇಕಲ್ಮಠದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಶಿವಾಚಾರ್ಯ ರತ್ನ ಲಿಂ.ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಹಿರೇಕಲ್ಮಠದ ಪಟ್ಟಾಧಿಕಾರ ಸ್ವೀಕರಿಸಿ 50 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ 'ಸುವರ್ಣ ಮಹೋತ್ಸವ' ಆರಂಭದ ಪ್ರಯುಕ್ತ ಶ್ರೀ ಮಠದಲ್ಲಿ ಕೋಟಿ ದೀಪೋತ್ಸವ ಹಾಗೂ ಕೋಟಿ ಬಿಲ್ವಾರ್ಚನೆ ಕಾರ್ಯಕ್ರಮವನ್ನು ಕಾರ್ತಿಕೋತ್ಸವ ದಲ್ಲಿ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿತ್ತು.

ಆದರೆ ಪ್ರಕೃತಿ ವೈಪರೀತ್ಯದಿಂದ ಮಳೆ ಬಾರದೆ ಅನಾವೃಷ್ಟಿ ಸೃಷ್ಟಿಯಾಗಿ ರೈತರು ಸಂಕಷ್ಟಕ್ಕೀಡಾದ ಕಾರಣ ಕೋಟಿ ದೀಪೋತ್ಸವ ಹಾಗೂ ಕೋಟಿ ಬಿಲ್ವಾರ್ಚನೆ ಕಾರ್ಯಕ್ರಮವನ್ನು ಮುಂದಿನ ವರ್ಷಕ್ಕೆ ಮುಂದೂಡಲಾಗಿದೆ ಎಂದು ಹೇಳಿದರು.

ಕದಳಿ ಕಾರ್ತಿಕೋತ್ಸವ ಲಕ್ಷ ದೀಪೋತ್ಸವವಾಗಿ ಪರಿವರ್ತನೆಯಾಗಿ ಶ್ರೀಮಠದಲ್ಲಿ 1 ಲಕ್ಷದ 5 ಸಾವಿರ ದೀಪಗಳನ್ನು ಬೆಳಗಿಸಲಾಗುವುದು. ಇದು ಪ್ರತಿ ವರ್ಷ ಮುಂದುವರೆಯುತ್ತದೆ ಎಂದ ಅವರು, ಲಕ್ಷ ದೀಪೋತ್ಸವಕ್ಕೆ ತಮಿಳುನಾಡು ರಾಜ್ಯದಿಂದ ಮಣ್ಣಿನ ದೀಪಗಳನ್ನು ಈಗಾಗಲೇ ತರಿಸಲಾಗಿದೆ ಎಂದು ನುಡಿದರು.

ಮಂಗಳವಾರ ನಡೆಯುವ ಮಹಾ ಪೂಜೆ, ಕದಳಿ ಕಾರ್ತಿಕೋತ್ಸವ, ಶ್ರೀಗುರು ಚನ್ನೇಶ್ವರ ಬೆಳ್ಳಿ ರಥೋತ್ಸವ, ಧರ್ಮಸಭೆಯಲ್ಲಿ ಪಂಚ ಪೀಠಗಳಲ್ಲೊಂದಾದ ಕಾಶಿ-ವಾರಣಾಸಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಭಗತ್ಪಾದರು ದಿವ್ಯ ಸಾನ್ನಿಧ್ಯ ವಹಿಸುವರು.

ಮುಖ್ಯ ಅತಿಥಿಗಳಾಗಿ ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಭಾಗವಹಿಸುವರು. ಧರ್ಮಸಭೆಯಲ್ಲಿ ಕೆ.ಮಲ್ಲೇಶಪ್ಪ ವಿರಚಿತ ಲಿಖಿತ 'ಜಪಯಜ್ಞ' ಕೃತಿ ಬಿಡುಗಡೆ ಮಾಡಲಾಗುವುದು.

ಪ್ರಸಾದದ ವ್ಯವಸ್ಥೆಯನ್ನು ಶಿವಮೊಗ್ಗ ನಗರದ ಶ್ರೀಮತಿ ವಿಶಾಲಾಕ್ಷಮ್ಮ ಲಿಂ.ಕೊಟ್ರಯ್ಯ ಮತ್ತು ಮಕ್ಕಳು ಹಾಗೂ ಶ್ರೀಮತಿ ಲಲಿತಮ್ಮ ಚನ್ನ ವೀರಯ್ಯ ನಡೆಸಿಕೊಡುವರು. ಮಠದ ವ್ಯವಸ್ಥಾಪಕ ಚನ್ನಬಸಯ್ಯ ಸುದ್ದಿ ಗೋಷ್ಠಿಯಲ್ಲಿದ್ದರು.

# ಬರ ನಿರ್ವಹಣೆಗೆ 895 ಕೋಟಿ ರೂ. : ಸಚಿವ ಕೃಷ್ಣ ಭೈರೇಗೌಡ

(1ನೇ ಪುಟದಿಂದ) ಮನವಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಅಂತರ ಮಂತ್ರಾಲಯ ತಾಂತ್ರಿಕ ಸಮಿತಿ (ಐ.ಎಮ್.ಟಿ.ಸಿ.) ರಾಜ್ಯದ 13 ಜಿಲ್ಲೆಗಳಲ್ಲಿ ಬರ ಅಧ್ಯಯನ ಪ್ರವಾಸ ಮಾಡಿದೆ.

ಅಧ್ಯಯನದ ನಂತರ ರಾಜ್ಯ ಸರ್ಕಾರದ ಅಧಿಕಾರಿಗಳು, ಮುಖ್ಯಮಂತ್ರಿಗಳೊಂದಿಗೂ ಸಮಾಲೋಚಿಸಿ ಕೇಂದ್ರಕ್ಕೆ ವರದಿ ಸಲ್ಲಿಸಿದೆ. ಆದರೆ ಕೇಂದ್ರದಿಂದ ಇಲ್ಲಿಯವರೆಗೂ ಯಾವುದೇ ಪರಿಹಾರ ರಾಜ್ಯಕ್ಕೆ ಬಂದಿಲ್ಲ. ಆದಷ್ಟು ಬೇಗ ಕೇಂದ್ರ ನೆರವು ನೀಡಬೇಕೆಂದು ಕಂದಾಯ ಸಚಿವರು ಈ ಸಂದರ್ಭದಲ್ಲಿ ಆಗ್ರಹಿಸಿದರು.

ರಾಜ್ಯ ಸರ್ಕಾರವು ಸಮರ್ಥವಾಗಿ ಬರ ನಿರ್ವಹಿಸಲು ಪ್ರೋ ಆಕ್ಟಿವ್ ಆಗಿ ಕೆಲಸ ಮಾಡಿದೆ. ಕಳೆದ 10 ವರ್ಷಗಳ ಪರಿಸ್ಥಿತಿಯನ್ನು ಅವಲೋಕಿಸಿ ಮುಂದಿನ ಜನವರಿ-ಫೆಬ್ರವರಿ ವೇಳೆಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಸುಮಾರು 6,237 ಸಮಸ್ಯಾತ್ಮಕ ಗ್ರಾಮಗಳನ್ನು ಮತ್ತು ನಗರ ಪ್ರದೇಶದ 914 ವಾರ್ಡ್‌ಗಳನ್ನು ಕುಡಿಯುವ ನೀರಿನ ಸಮಸ್ಯಾತ್ಮಕ ಪ್ರದೇಶಗಳೆಂದು ಗುರುತಿಸಿ ಮುಂಜಾಗ್ರತೆಯಾಗಿ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಈಗಾಗಲೇ 3,672 ಖಾಸಗಿ ಬೋರವೆಲ್‌ಗಳನ್ನು ಗುರುತಿಸಿ ಬಾಡಿಗೆಗೆ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಮತ್ತು ಉಳಿದಂತೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಲಾಗಿದೆ ಎಂದರು.

ಬರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕ್ಷೇತ್ರ ಮಟ್ಟದ ಸಮಸ್ಯೆಗಳನ್ನು ಗುರುತಿಸಿ, ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಗ್ರಾಮ ಪಂಚಾಯತ್ ಮಟ್ಟದ ಟಾಸ್ಕ್‌ಫೋರ್ಸ್ ರಚಿಸಿದೆ. ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ.), ಕುಡಿಯುವ ನೀರು ವಿಭಾಗದ ಅಸಿಸ್ಟೆಂಟ್ ಇಂಜೀನಿಯರ್ ಮತ್ತು ಗ್ರಾಮ ಆಡಳಿತ ಅಧಿಕಾರಿ ಇರುವ ಈ ಸಮಿತಿಯು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರು, ಮೇವು ಸಮಸ್ಯೆ ಕಂಡು ಬಂದಲ್ಲಿ ತಕ್ಷಣ ಈ ಕುರಿತು ನಿರ್ಣಯ ಕೈಗೊಂಡು ತಹಶೀಲ್ದಾರರಿಗೆ ಸಲ್ಲಿಸಬೇಕು.

ಈ ಸಮಿತಿ ಮನವಿಯನ್ನು ಪರಿಗಣಿಸಿ 24 ಗಂಟೆಯಲ್ಲಿ ನೀರು ಪೂರೈಸಲು ತಹಶೀಲ್ದಾರರು ತಕ್ಷಣ ಕ್ರಮ ವಹಿಸಬೇಕು. ವಿಶೇಷವಾಗಿ ಈ ಸಮಿತಿ ಕುಡಿಯುವ ನೀರಿನ ಕುರಿತು ಮತ್ತು ಮೇವು, ಟ್ಯಾಂಕರ್ ನೀರು ಸರಬರಾಜು, ಬಾಡಿಗೆ ಬೋರವೆಲ್, ನೀರು ಸರಬರಾಜು ಪೈಪ್‌ಲೈನ್ ದುರಸ್ತಿ ಕಾರ್ಯಗಳಿಗೆ ಗಮನಹರಿಸಲಿದೆ ಎಂದು ಸಚಿವರು ಹೇಳಿದರು.


ಇದಕ್ಕಾಗಿ ಅನುದಾನ ಕೊರತೆಯಾಗದಂತೆ ತಹಶೀಲ್ದಾರರ ಖಾತೆಗೆ ರೂ. 50 ಲಕ್ಷ ಬಿಡುಗಡೆ ಮಾಡುವಂತೆ ಈಗಾಗಲೇ ಸೂಚಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ಸದನದಲ್ಲಿ ತಿಳಿಸಿದರು.

ಬರ ಪರಿಸ್ಥಿತಿ ಇದ್ದರೂ ಕೇಂದ್ರ ಸರ್ಕಾರ ಇಲ್ಲಿಯವರೆಗೂ ಪರಿಹಾರ ಹಣ ಬಿಡುಗಡೆ ಮಾಡಿಲ್ಲ. ಆದರೂ ರಾಜ್ಯ ಸರ್ಕಾರವು ಮೊದಲ ಕಂತಾಗಿ ರೂ. 2,000 ಗಳನ್ನು ಬರ ಪರಿಹಾರವಾಗಿ ನೀಡಲು ನಿರ್ಧರಿಸಿದೆ.

ಈ ವಾರದಲ್ಲಿ ರಾಜ್ಯದ ರೈತರಿಗೆ ಪರಿಹಾರ ಹಣ ಜಮೆಯಾಗಲಿದೆ. ಪರಿಹಾರ ಹಣ ದುರುಪಯೋಗ ಆಗಿರುವ ಬಗ್ಗೆ ಹಿಂದಿನ ಪ್ರಕರಣಗಳ ಹಿನ್ನೆಲೆಯಲ್ಲಿ ಯಾವುದೇ ಹಸ್ತಕ್ಷೇಪ ಇಲ್ಲದೇ ನೇರವಾಗಿ ಆಯಾ ರೈತರ ಖಾತೆಗೆ ಆಟೋಮ್ಯಾಟಿಕ್ ಮೋಡ್‌ನಲ್ಲಿ ಜಮೆಯಾಗುವಂತೆ ಕ್ರಮಕೈಗೊಳ್ಳಲಾಗಿದೆ.

ಈ ವಾರ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಪರಿಹಾರ ಜಮೆ ಮೊದಲ ಪೇಮೆಂಟ್ ಮಾಡಲಾಗುತ್ತದೆ ಎಂದು ಕಂದಾಯ ಸಚಿವರು ಸದನದಲ್ಲಿ ತಿಳಿಸಿದರು.

## ನಗರದಲ್ಲಿಂದು ಜೆ.ಹೆಚ್. ಪಟೇಲ್ ಸ್ಮರಣೆ



ಜೆ.ಹೆಚ್ ಪಟೇಲ್ ಅಭಿಮಾನಿ ಬಳಗದಿಂದ ದಿ. ಮಾಜಿ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಇಂದು ಸಂಜೆ 5 ಗಂಟೆಗೆ ಎಂ.ಸಿ.ಸಿ. 'ಬಿ' ಬ್ಲಾಕ್‌ನ ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.


**ಆಯಾ ಬೇಕಾಗಿದ್ದಾರೆ**
ಸಿದ್ದವೀರಪ್ಪ ಬಡಾವಣೆ, ಮೂರನೇ ಕ್ರಾಸ್ ವಾಸದ ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡುವ ಆಯಾ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.
98804 36414, 98451 40948

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
SSLC ನೇರ ಪರೀಕ್ಷೆ
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಪೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266

**ಬೇಕಾಗಿದ್ದಾರೆ**
ಎಂಇಎಸ್ ವಿದ್ಯಾಸಂಸ್ಥೆ
ಆಂಜನೇಯ ಬಡಾವಣೆ ದಾವಣಗೆರೆ. ಶಾಲೆಯಲ್ಲಿ ಕೆಲಸ ಮಾಡುವ ಆಯಾ ಬೇಕಾಗಿದ್ದಾರೆ. ಅವರಿಗೆ ಊಟದ ಮತ್ತು ವಸತಿಯ ಸೌಲಭ್ಯವಿರುತ್ತದೆ. ಕೂಡಲೇ ಸಂಪರ್ಕಿಸಿ.
98804 36414, 98800 30171

**COMMERCIAL COMPLEX FOR RENT**
Ground Floor - 600 Sq.ft
First Floor 1700 Sq.ft
Second Floor 1700 Sq.ft
with lift facility in chetan Hotel Road, Davanagere.
79752 35107

**ಬೇಕಾಗಿದ್ದಾರೆ**
Two wheeler Bike ಮೆಕಾನಿಕ್ ಬೇಕಾಗಿದ್ದಾರೆ. ಸಂಪರ್ಕಿಸಿ.
99647 10551

**ಬೇಕಾಗಿದ್ದಾರೆ**
ಕನಿಷ್ಠ ಓದಲು, ಬರೆಯಲು ಹಾಗೂ ಅನುಭವವಿರುವ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವೇತನ 9000 ರಿಂದ 10000 ESI & PF ಸೌಲಭ್ಯವಿರುತ್ತದೆ. ಸಂಪರ್ಕಿಸಿ :
73539 50027, 94499 18575

**ಬೇಕಾಗಿದ್ದಾರೆ**
ಬಿ.ಕೆ. ಬಾರ್ & ರೆಸ್ಟೋರೆಂಟ್
ಮಿಲ್ಕಿ ಹೋಟೆಲ್‌ಗೆ ಮ್ಯಾನೇಜರ್ ಬೇಕಾಗಿದ್ದಾರೆ. ಬಾಡಾ ಕ್ರಾಸ್, ಮೋತಿ ನಗರ, ದಾವಣಗೆರೆ.
98441 01178

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547

**GOVERNEMENT OF KARNATAKA**
**33 KARANATAKA BN NCC DAVANGERE**
1. This unit intends to purchase dry ration and condiments for Combined Annual Training Camp at Kondajji from 08 Jan 2024 to 17 Jan 2024 & 18 to 27 Jan 2024.
2. the interested parties/vendors are requested to submit your lowest quotations by 30 Dec. 2023, Quotation received after due date will not be accepted.
3. 2% TDS of income Tax and 2% TDS of GST is applicable on all procurements by issuing supply order after entering into contact with concerned vendor.
4. 2% TDS of IT will be made when the contract bill value exceeds Rs. 30,000/- on every payment & Rs. 1,00,000/- during the current financial year.
5. 2% TDS of GST will be made when the contract bill value exeeds Rs.250000/- on every single payment.
6. For any details contact this office Telephone No. 08192-224417.
No. 0409/Q/Camp/NCC dated 11 Dec. 2023.
*Sd/-* **(Lt Col Rajeev Kumar)**
Commanding Officer


## ಪಡಿತರ ಅಕ್ರಮ ತಡೆಗೆ ಪ್ರಯತ್ನ

(1ನೇ ಪುಟದಿಂದ) ಹಾಕಿಕೊಂಡು, ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ಮುಟ್ಟುಗೋಲು ದಾಸ್ತಾನನ್ನು ವಿಲೇ ಮಾಡಿ, ವಿಲೇಪಡಿಸಿದ ಪಡಿತರ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲಾಗುತ್ತಿದೆ ಎಂದು ಹೇಳಿದರು.

ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರೆಂದು ಕಂಡುಬಂದ - ವ್ಯಕ್ತಿಗಳ ವಿರುದ್ಧ ಹಾಗೂ ಈ ಘಟನೆಗಳಿಗೆ ಕಾರಣಕರ್ತರಾದ ಅಧಿಕಾರಿ/ನೌಕರರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಿ ಆಪಾದನೆಗಳ ಬಗ್ಗೆ ದೋಷಾರೋಪಣೆ ಪಟ್ಟಿಯನ್ನು ಸಂಬಂಧಿಸಿದ ನ್ಯಾಯಾಲಯಗಳಲ್ಲಿ ದಾಖಲಿಸಲಾಗುತ್ತಿದ್ದು, ಕಾನೂನು ರೀತ್ಯ ಕ್ರಮ ಜರುಗಿಸಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಏಪ್ರಿಲ್-2023 ರಿಂದ ನವೆಂಬರ್-2023 ರ ಅಂತ್ಯದವರೆಗೂ ಅಗತ್ಯ ವಸ್ತುಗಳ ಕಾಯ್ದೆ 1955 ರಡಿ ಪಡಿತರ ಆಹಾರ ಧಾನ್ಯ ಕಳ್ಳ ಸಾಗಾಣಿಕೆಯ ಒಟ್ಟು 251 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಈ ಪೈಕಿ 232 ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲಿಸಿದ್ದು, ಒಟ್ಟು 31.32 ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡು, ಈ ಪ್ರಕರಣಗಳಲ್ಲಿ ಒಟ್ಟು 385 ಆರೋಪಿಗಳನ್ನು ಬಂಧಿಸಿ, 167 ವಾಹನಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ ಎಂದರು.

## ಆಸ್ಪತ್ರೆಗೆ ಹಿಮೋಫಿಲಿಯಾ ಪತ್ತೆ ಯಂತ್ರ

(1ನೇ ಪುಟದಿಂದ) ಕಾರ್ಯಕ್ರಮದಡಿಯಲ್ಲಿ ಹಿಮೋಫಿಲಿಯಾ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ಮತ್ತು ಆರೈಕೆಯನ್ನು ಮಾಡಲಾಗುತ್ತಿದೆ. ಹಿಮೊಫಿಲಿಯಾ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಗಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಕೆಲವು ವೈದ್ಯಕೀಯ ಆಸ್ಪತ್ರೆಗಳಲ್ಲಿ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ 6 ರಿಂದ 8 ಹಾಸಿಗೆಗಳ ದಿನದ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಈ ಆರೈಕೆ ಕೇಂದ್ರಗಳಲ್ಲಿ ಇಬ್ಬರು ಶುಶ್ರೂಷಕಿಯರಿಗೆ ರಕ್ತಸಂಬಂಧಿತ ಕಾಯಿಲೆಗಳ ರೋಗಿಗಳ ಚಿಕಿತ್ಸೆ ಮತ್ತು ಆರೈಕೆಯ ಆರಂಭಿಕ ತರಬೇತಿಯನ್ನು ನೀಡಲಾಗಿದೆ ಎಂದು ಹೇಳಿದರು.

ಈ ಕೇಂದ್ರಗಳಲ್ಲಿ ಉಚಿತ ಆಂಟಿ ಹಿಮೋಫಿಲಿಯಾ, ಉಚಿತ ರಕ್ತ ನೀಡುವುದು, ಉಚಿತ ಸಮಾಲೋಚನೆ, ಉಚಿತ ಫಿಜಿಯೋಥೆರಪಿ, ಹೆಚ್ಚಿನ ಚಿಕಿತ್ಸೆ, ಉಚಿತ ರೋಗಪತ್ತೆ ಸೇವೆಗಳನ್ನು ಒದಗಿಸುತ್ತಿದ್ದು, ಒಬ್ಬ ಹಿಮೋಫಿಲಿಯಾ ರೋಗಿಗೆ ಪ್ರತಿ ವರ್ಷ ಅಂದಾಜು ರೂ. 3 ರಿಂದ 4 ಲಕ್ಷ ವೆಚ್ಚವಾಗಲಿದೆ ಎಂದರು.

## ಐದು ಮಸೂದೆಗಳಿಗೆ ಅಂಗೀಕಾರ

(1ನೇ ಪುಟದಿಂದ) ಎಂದರು. ಆಗ ಕಾಂಗ್ರೆಸ್‌ನ ಹಲವು ಶಾಸಕರು ಸಮರ್ಥನೆಗೆ ಮುಂದಾದರು. ಇದು ಆಡಳಿತಾರೂಢ ಹಾಗೂ ಪ್ರತಿಪಕ್ಷಗಳ ಶಾಸಕರ ನಡುವೆ ಚಕಮಕಿಗೆ ಕಾರಣವಾಯಿತು.

ಖಾನ್ ವಿರುದ್ಧ ವಿಧಾನಸಭಾಧ್ಯಕ್ಷರು ಕ್ರಮ ತೆಗೆದುಕೊಂಡು ಅಮಾನತ್ತು ಮಾಡಬೇಕಿತ್ತು. ಖಾನ್ ಹೇಳಿದ ರೀತಿಯಲ್ಲಿ ಸಲಾಂ ಮಾಡಲು ನಾವೇನು ಗುಲಾಮರೇ? ಎಂದು ಅಶೋಕ್ ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಹಾಗೂ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಪ್ರತಿಪಕ್ಷಗಳು ಸಮಯ ಪೋಲು ಮಾಡುತ್ತಿವೆ ಎಂದರು.

ಈ ವಿಷಯದ ಬಗ್ಗೆ ಮಾತನಾಡಬೇಕಿದ್ದರೆ ನೋಟಿಸ್ ನೀಡಬಹುದಿತ್ತು. ಪ್ರತಿಪಕ್ಷಗಳು ಪ್ರಶ್ನೋತ್ತರ ಕಲಾಪಕ್ಕೆ ಅವಕಾಶ ನೀಡಬೇಕು ಎಂದು ಸ್ಪೀಕರ್ ಖಾದರ್ ಹೇಳಿದರು.

ಆದರೂ, ಬಿಜೆಪಿ ಶಾಸಕರು ಗದ್ದಲ ಮುಂದುವರೆಸಿದಾಗ, ಖಾದರ್ ಕಲಾಪ ಕೈಗೆತ್ತಿಕೊಂಡರು. ಗದ್ದಲದ ನಡುವೆಯೇ ಮಸೂದೆಗಳನ್ನು ಮಂಡಿಸಿ ಅಂಗೀಕಾರ ಪಡೆಯಲಾಯಿತು.

ಕರ್ನಾಟಕದ ಜಿ.ಎಸ್.ಟಿ. ಎರಡನೇ ತಿದ್ದುಪಡಿ ಮಸೂದೆ, ಕರ್ನಾಟಕ ವೈದ್ಯಕೀಯ ಶಿಕ್ಷಣದ ಕಡ್ಡಾಯ ಸೇವೆ ಮಸೂದೆ, ಕರಾವಳಿ ಅಭಿವೃದ್ಧಿ ಮಂಡಳಿ ಮಸೂದೆ, ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಮಸೂದೆ ಹಾಗೂ ಕರ್ನಾಟಕ ಮುದ್ರಾಂಕ ತಿದ್ದುಪಡಿ ಮಸೂದೆಗಳಿಗೆ ಅಂಗೀಕಾರ ಪಡೆಯಲಾಯಿತು.

## ಹೊನ್ನಾಳಿಯಲ್ಲಿ ವಿದ್ಯುತ್ ಅವಘಡ ತಡೆಗಟ್ಟಲು ವಿವಿಧ ಸ್ಪರ್ಧೆಗಳು



ಹೊನ್ನಾಳಿ, ಡಿ. 11- ಬೆಸ್ಕಾಂ ವತಿಯಿಂದ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ವಿದ್ಯುಚ್ಛಕ್ತಿ ಸುರಕ್ಷತೆಯ ಬಗ್ಗೆ ಸರ್ಕಾರಿ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಿ ವಿದ್ಯುತ್ ಅವಘಡಗಳನ್ನು ತಡೆಗಟ್ಟಲು ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದು ಬೆಸ್ಕಾಂ ಎಇಇ ಜಯಪ್ಪ ತಿಳಿಸಿದರು.

ಪಟ್ಟಣದ ಬಿಇಒ ಕಚೇರಿಯಲ್ಲಿ ಬಿಇಒ ಎಸ್.ಸಿ. ನಂಜರಾಜ್ ಅವರಿಗೆ ಬೆಸ್ಕಾಂ ಇಲಾಖೆಯ ಸ್ಪರ್ಧೆಗಳ ಬಗ್ಗೆ ಮಾಹಿತಿ ಪತ್ರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪಟ್ಟಣದ ಗುರುಭವನದಲ್ಲಿ ನಾಡಿದ್ದು ದಿನಾಂಕ 13 ರ ಬುಧವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ರವರೆಗೆ ವಿದ್ಯುತ್ ಸುರಕ್ಷತೆ ಕುರಿತಂತೆ 2 ಪುಟ ಮೀರದಂತೆ ಪ್ರಬಂಧ ರಚನೆ ಸ್ಪರ್ಧೆ ಮತ್ತು ಇದೇ ದಿನಾಂಕ 22 ರ ಶುಕ್ರವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ಸುರಕ್ಷತೆ ಕುರಿತಂತೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರವೇ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮೊದಲನೇ ಬಹುಮಾನವಾಗಿ 2000ರೂ, ದ್ವಿತೀಯ ಬಹುಮಾನ 1000ರೂ. ಮತ್ತು ತೃತೀಯ ಬಹುಮಾನ 750 ರೂ.ಗಳನ್ನು ನೀಡಿ ಗೌರವಿಸಲಾಗುತ್ತದೆ ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಬಿಇಒ ಎಸ್.ಸಿ. ನಂಜರಾಜ್ ಬೆಸ್ಕಾಂ ಶಾಖಾಧಿಕಾರಿಗಳು ಮತ್ತು ನೌಕರರು ಉಪಸ್ಥಿತರಿದ್ದರು.

# 'ಓಂ ನಮಃ ಶಿವಾಯ'ಕ್ಕೆ ಸಮನಾದ ಮಂತ್ರ ಬೇರೊಂದಿಲ್ಲ

## ಶರಣರು ಕಂಡ ಶಿವ ಪ್ರವಚನ ಮಾಲೆಯಲ್ಲಿ ಡಾ.ಬಸವರಾಜ ರಾಜಋಷಿ



ದಾವಣಗೆರೆ, ಡಿ.11- ಓಂ ನಂಃ ಶಿವಾಯ ಎಂಬುದೇ ಆದಿ ಮಂತ್ರ, ಬೀಜ ಮಂತ್ರ, ಮೂಲ ಮಂತ್ರ. ಅದಕ್ಕೆ ಸಮವಾದ ಮಂತ್ರ ಬೇರೊಂದಿಲ್ಲ ಎಂದು ಬಸವಾದಿ ಶಿವಶರಣರು ತಿಳಿಸಿಕೊಟ್ಟಿರುವ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ.ಬಸವರಾಜ ರಾಜಋಷಿ ಹೇಳಿದರು.

ಇಲ್ಲಿನ ವಿದ್ಯಾನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾ ಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆ ಯ 8ನೇ ದಿನವಾದ ಸೋಮವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

'ಓಂ' ಎಂದರೆ ನಾನು ಆತ್ಮ, 'ನಮಃ' ಎಂದರೆ ನಮಸ್ಕರಿಸುತ್ತಿದ್ದೇವೆ. 'ಶಿವಾಯ' ಎಂದರೆ ಶಿವನಿಗೆ ಎಂದರ್ಥ ಎಂದು ಮಂತ್ರದ ಕುರಿತು ಅವರು ವಿಶ್ಲೇಷಿಸಿದರು.

'ಓಂ ನಮಃ ಶಿವಾಯ' ಮಂತ್ರವನ್ನು ಚೆನ್ನಾಗಿ ಅರ್ಥ ಮಾಡಿ ಕೊಂಡಿರುವವರು ಪಂಚಾಕ್ಷರಿ ಮಂತ್ರವನ್ನೂ ಹೇಳಬಹುದು. ಏಕೆಂದರೆ ನಾನು ಆತ್ಮ ಆಗಿದ್ದೇನೆ ಎಂಬರ್ಥದ 'ಓಂ' ಅಕ್ಷರ ಬಿಟ್ಟು ಅನುಭಾವಿಕ ಸಿದ್ಧಾಂತದಲ್ಲಿ 'ಶಿವಾಯ ನಮಃ' ಎಂದು ಹೇಳಬಹುದು ಎಂದರು.

ಇಷ್ಟಲಿಂಗ ರೂಪದ ಶಿವಲಿಂಗವು ನಮ್ಮೆಲ್ಲರ ಇಚ್ಛೆ ಮತ್ತು ಅಭಿಲಾಷೆಗಳನ್ನು ಪೂರೈಸುತ್ತದೆ ಎಂಬುದನ್ನು ವೇದಗಳ ಮೂಲಕ ಈಗಾಗಲೇ ಹೇಳಲಾಗಿದೆ. ಆದ್ದರಿಂದ ಅಂಗದ ಮೇಲೆ ಕಟ್ಟಿಕೊಂಡ ಲಿಂಗ ಶಿವಲಿಂಗ. ಬಸವಾದಿ ಶರಣರು ಕೊಟ್ಟ ಶಿವಲಿಂಗ. ಅದು ಸ್ಥಾವರ ಲಿಂಗವೇ ಇರಬಹುದು. ಇಷ್ಟಲಿಂಗವೇ ಇರಬಹುದು ಅದಕ್ಕೆ ಓಂ ನಮಃ ಶಿವಾಯ ಎಂಬುದು ಒಂದೇ ಮಂತ್ರ. ಈ ಮಂತ್ರ ಬಸವಾದಿ ಶರಣರಿಗೂ ಪೂರ್ವದಲ್ಲಿ ಇದ್ದ ಮಂತ್ರ ಎಂದು ಹೇಳಿದರು.

ಮನಸ್ಸಿಂದ ಅಥವಾ ಶಬ್ಧಗಳಿಂದಾಗಲೀ ಉಚ್ಚರಿಸುವ ಶಬ್ಧ 'ಮಂತ್ರ' ಹಾಗೂ ಪರಮಜ್ಯೋತಿ ಸ್ವರೂಪನಾದ ಪರಮಾತ್ಮನನ್ನು ಯತಾರ್ಥವಾಗಿ ಅರ್ಥ ಮಾಡಿಕೊಂಡು ಜೀವನದಲ್ಲಿ ಅನುಷ್ಠಾನಗೊಳಿಸುವುದೇ 'ತಂತ್ರ' ಇವೆರಡೂ ನಮಗೆ ಅನುಭಾವಕ್ಕೆ ಬರಬೇಕು ಎಂಬುದು ಶಿವಶರಣರ ಧ್ಯೇಯ ಎಂದರು.

ನಮಗೆ ಬೇಕಾದ ಮಂತ್ರಗಳನ್ನು ಸೃಷ್ಟಿಸಿಕೊಳ್ಳದೆ, ಜಪ ಮಂತ್ರ, ತಪ ಮಂತ್ರ ಒಂದೇ ಮಂತ್ರ. ಅಂತರಂಗದಲ್ಲೂ, ಬಹಿರಂಗದಲ್ಲೂ 'ಓಂ ನಮಃ ಶಿವಾಯ' ಒಂದೇ ಸೂಕ್ತ ಮಂತ್ರ. ಆದರೆ ಆಸೆ, ಅಭಿಲಾಷೆಗಳನ್ನು ಇಟ್ಟುಕೊಂಡು ಈ ಮಂತ್ರ ಜಪಿಸಬಾರದು. ಶಿವನೇ ನೀನು ನನಗೆ ಬೇಕು ಎಂಬ ಭಾವನೆಯಿಂದ ಜಪಿಸಬೇಕು. ಮಂತ್ರದ ಮೂಲಕ ಶಿವನನ್ನೇ ವಶಪಡಿಸಿಕೊಂಡ ಮೇಲೆ ಬೇರೆಲ್ಲಾ ಇಷ್ಟಾರ್ಥಗಳೂ ಸಿದ್ಧಿಸಿದಂತೆಯೇ. ಆದ್ದರಿಂದ ಇದು ಪರಮಾತ್ಮನನ್ನೇ ಒಲಿಸಿಕೊಳ್ಳುವ ಹಾಗೂ ಜನ್ಮ ಜನ್ಮದ ಶ್ರೇಯೋಭಿವೃದ್ಧಿಗಾಗಿ ಕೊಟ್ಟ ಮಂತ್ರ ಎಂದು ಪ್ರತಿಪಾದಿಸಿದರು.

ಸರಿಯಾದ ಜ್ಞಾನ ಪ್ರಾಪ್ತಿಯಾಗದ ಕಾರಣ ಅನ್ಯ ಮಂತ್ರಗಳನ್ನು ಜಪಿಸುತ್ತಿದ್ದೇವೆ. ಇದು ಪರಮಪೂಜ್ಯನನ್ನು ಬಿಟ್ಟು ಪೂಜಾರಿಗಳನ್ನು ಜಪಿಸಿದಂತೆ ಎಂದು ಹೇಳಿದರು.

ಸದಾ ಕಾಲಕ್ಕೆ ಆತ್ಮ ಪರಮಾತ್ಮರ ಅನುಸಂಧಾನ ಮನಸ್ಸಿನಲ್ಲಿ ಮಾಡುವುದೇ ಸತ್ಯ ಶಿವಯೋಗ ಎಂದು ಪ್ರತಿಪಾದಿಸಿದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನದ ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.

### ಶಿವಯೋಗದ ಪ್ರಾತ್ಯಕ್ಷಿಕೆ

**ನಾಳೆ ಬುಧವಾರ ಬೆಳಿಗ್ಗೆ 6 ರಿಂದ 7ರವರೆಗೆ ಪ್ರವಚನ ನಡೆಯುತ್ತಿರುವ ಸ್ಥಳದಲ್ಲಿ ಶಿವಯೋಗದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿದ್ದು, ಡಾ. ಬಸವರಾಜ ರಾಜಋಷಿ ನಡೆಸಿಕೊಡುವರು. ಆಸಕ್ತರು ಭಾಗವಹಿಸಬಹುದು.**

## ಹರಪನಹಳ್ಳಿ ಉಪ್ಪಾರ ಸಮಾಜದ ಅಧ್ಯಕ್ಷರಾಗಿ ತಿಮ್ಮಪ್ಪ



ಹರಪನಹಳ್ಳಿ, ಡಿ. 11 - ಉಪ್ಪಾರ ಸಮಾಜದ ತಾಲ್ಲೂಕು ಅಧ್ಯಕ್ಷರಾಗಿ ಕೆಳಗಿನ ಉಪ್ಪಾರ ಗೇರಿಯ ಟಿ. ತಿಮ್ಮಪ್ಪ ಅವಿರೋಧ ಆಯ್ಕೆಯಾಗಿದ್ದಾರೆ.

ಪಟ್ಟಣದ ಮೇಗಳ ಉಪ್ಪಾರಗೇರಿಯ ಸಮುದಾಯ ಭವನದಲ್ಲಿ ಇಂದು ಜರುಗಿದ ಸಭೆಯಲ್ಲಿ ತೆರವಾದಂತಹ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸ್ಥಾನಗಳಿಗೆ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಯಿತು.

ಅಧ್ಯಕ್ಷರಾಗಿ ಟಿ. ಟಿಮ್ಮಪ್ಪ ಕೆಳಗಳ ಉಪ್ಪಾರ ಗೇರಿ ಪ್ರಧಾನ ಕಾರ್ಯದರ್ಶಿಯಾಗಿ ಡಿ. ಮಂಜಪ್ಪ ಮಾಡ್ಲಿಗೇರಿ ಖಜಾಂಚಿಯಾಗಿ - ನ್ಯಾಮತಿ ಪರಶುರಾಮಪ್ಪ ಶಿರಗನಹಳ್ಳಿ, ಉಪಾಧ್ಯಕ್ಷ- ಚೌಡಪ್ಪ ತಾಳೆದಹಳ್ಳಿ, ಗಿರಿರಾಜ ಮ್ಯಾಗಳ ಉಪ್ಪಾರಗೆರೆ, ಹಾಲಪ್ಪ ಬಣಕಾರ್ ಯಲ್ಲಾಪುರ , ಅಂಗಡಿ ಅಂಜಿನಪ್ಪ ಶಂಕರನಳ್ಳಿ, ಮರಿಯಪ್ಪ ಸಿಂಗ್ರಿಹಳ್ಳಿ, ತಾಲ್ಲೂಕು ಸಂಚಾಲಕ ರಾಗಿ - ಎಂ. ವೆಂಕಟೇಶ ಶೃಂಗಾರ ತೋಟ, ಸಂಘಟನಾ ಕಾರ್ಯದರ್ಶಿ ಎಂ. ಫಕೀರಪ್ಪ ತಿಪ್ಪನಾಯಕನ ಹಳ್ಳಿ, ಎಸ್. ಕಾಂತರಾಜ್ ಎರಡೆತ್ತಿನಹಳ್ಳಿ, ಓ. ರಾಜಪ್ಪ ದ್ಯಾಪನಾಯಕನಹಳ್ಳಿ, ಕರಿಬಸಪ್ಪ ನಾಗಲಾಪುರ, ಸಹ ಕಾರ್ಯದರ್ಶಿಗಳಾಗಿ- ತುಕ್ಕೇಶ್ ಚಿಕ್ಕಬ್ಬಳ್ಳಿ, ಕರಿಬಸಪ್ಪ ಯು ತಲುವಾಗಲು, ವೆಂಕಟೇಶ್ ಶಂಕರನಳ್ಳಿ , ವೈ. ಮಂಜುನಾಥ್ ಅರಸೀಕೆರೆ ಆಯ್ಕೆಯಾಗಿದ್ದಾರೆ.

ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ದಾವಣಗೆರೆ ನಗರ ಪಾಲಿಕೆ ಮಾಜಿ ಉಪ-ಮೇಯರ್ ಜಿ. ಮಂಜಮ್ಮ ತಾಲ್ಲೂಕು ಉಪ್ಪಾರ ನೌಕರ ಸಂಘದ ಅಧ್ಯಕ್ಷ ಎಂ. ರಮೇಶ್, ಉಪಾಧ್ಯಕ್ಷ ಬಿ. ಕೊಟ್ರೇಶ್, ಕಾರ್ಯದರ್ಶಿಗಳಾದ ಪಿ.ಕೆ. ಅಂಜಿನಪ್ಪ, ಎಸ್. ಮಲ್ಲಿಕಾರ್ಜುನ್, ಸಮಾಜದ ಮುಖಂಡರುಗಳಾದ ಕಡಬಗೆರೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಬಣಕಾರ ಮಂಜಪ್ಪ ಕಸವನಹಳ್ಳಿ, ತಾಲ್ಲೂಕು ಯುವಕ ಸಂಘದ ಅಧ್ಯಕ್ಷ ಕೆ. ಕೊಟ್ರೇಶ್, ಕೂಲಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಟಿ. ಮಂಜುನಾಥ್ ಎರಡೆತ್ತಿನಹಳ್ಳಿ, ತಿಪ್ಪನಾಯಕನಹಳ್ಳಿ ಪರಶುರಾಮಪ್ಪ, ಕೆ. ತಿಮ್ಮಪ್ಪ, ಎಂ. ಮಾರಪ್ಪ, ವೈ. ತಿಮ್ಮಪ್ಪ ಯಲ್ಲಾಪುರ ಮತ್ತಿತರರು ಭಾಗವಹಿಸಿದ್ದರು.


## ಗಂಗನರಸಿಯಲ್ಲಿಂದು ಛಟ್ಟಿ ಅಮಾವಾಸ್ಯೆ



ಹರಿಹರ ತಾಲ್ಲೂಕು ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ, ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಅಮಾವಾಸ್ಯೆ ವಿಶೇಷ ಪೂಜೆ ನಡೆಯಲಿದೆ. ಬೆಳಿಗ್ಗೆ 11 ಕ್ಕೆ ಶ್ರೀ ಗೋಣಿ ಬಸವೇಶ್ವರ, ನಾಗದೇವತಾ ಸ್ವಾಮಿಗಳಿಗೆ ವಿಶೇಷ ಪೂಜೆ, ಅಭಿಷೇಕ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆಯನ್ನು ತಾಲ್ಲೂಕಿನ ಹಳೇ ಹರ್ಲಾಪುರದ ಪೇಟಾ ಬಸಪ್ಪರ ಹೆಚ್. ಮಂಜುನಾಥ ಸುನೀತಾ ಮತ್ತು ಮಕ್ಕಳು ಏರ್ಪಡಿಸಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಹರಿಹರ : ವೀರಶೈವ ಮಹಾಸಭಾದ ಸಭೆ


ದೇವಸ್ಥಾನ ರಸ್ತೆಯ ರೇಣುಕಾ ಮಂದಿರದ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಹರಿಹರ ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭಾದ ವತಿಯಿಂದ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ ಭಾನುವಳ್ಳಿ ತಿಳಿಸಿದ್ದಾರೆ.




**LADIES PG BUILDING FOR RENT**
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
Mobi. : 95351 14063, 96203 71544, 97428 35642

**Property Hub**
Property Works Under One Roof
- EC (All Karnataka)
- Certified Copy
- E-Swathu
- Building Licence
- Loans – from 40 Banks (Including SBI, Canara Bank, HDFC & Others)
- Site & Merger Bifurcation
- Property Registration
- Mortgage

# 831, Nijalingappa Badavane, Davangere.
Mob : 96118 66449, 96325 54524



# 'ಲೋಕ' ಸಿದ್ಧತೆ ಆರಂಭ : ವಲ್ನೆರಬಲ್, ಕ್ರಿಟಿಕಲ್ ಮತಗಟ್ಟೆಗಳ ಸಮೀಕ್ಷೆ



ದಾವಣಗೆರೆ, ಡಿ.11- ಲೋಕಸಭಾ ಚುನಾವಣೆಗೆ ಸಿದ್ದತೆ ನಡೆಯುತ್ತಿದ್ದು, ಜಿಲ್ಲೆಯಲ್ಲಿ ಮುಕ್ತ-ಶಾಂತಯುತ ಚುನಾವಣೆ ನಡೆಸಲು ವಲ್ನೆರಬಲ್, ಕ್ರಿಟಿಕಲ್ ಮತಗಟ್ಟೆಗಳ ಸಮೀಕ್ಷೆ ಕೈಗೊಂಡು ಚುನಾವಣೆ ನಡೆಸಲು ಅಧಿಕಾರಿಗಳು ಸಿದ್ದರಾಗ ಬೇಕೆಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ. ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮುಂಬರುವ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದಂತೆ ಮುಕ್ತ, ಶಾಂತಿಯುತ ಚುನಾವಣೆ ನಡೆಸಲು ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಕೈಗೊಂಡ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ದಾವಣಗೆರೆ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳು ಮತ್ತು ವಿಜಯನಗರ ಜಿಲ್ಲೆಯ ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ಸೇರಲಿದೆ.

ಈ ಹಿಂದೆ ನಡೆದ ಚುನಾವಣಾ ಸಂದರ್ಭದಲ್ಲಿ ನಡೆದ ಗುಂಪು ಘರ್ಷಣೆ ಮತ್ತು ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಗಳನ್ನು ಆಧರಿಸಿ ಸಾರ್ವಜನಿಕರು ಮುಕ್ತವಾಗಿ ಮತ ದಾನ ಮಾಡಲು ಬೇಕಾದ ವಾತಾವರಣ ಕಲ್ಪಿಸಲು ದುರ್ಬಲ ಪ್ರದೇಶಗಳನ್ನು ಗುರುತಿಸಿ, ಅಲ್ಲಿನ ಮತಗಟ್ಟೆಗಳನ್ನು ಕ್ರಿಟಿಕಲ್ ಮತಗಟ್ಟೆಗಳೆಂದು ಗುರುತಿಸಿ, ಇಲ್ಲಿ ಶಾಂತಯುತ ಮತದಾನಕ್ಕೆ ಅಗತ್ಯವಿರುವ ಎಲ್ಲಾ ಕ್ರಮ ಕೈಗೊಳ್ಳಲಾಗುತ್ತದೆ. ಈ ಬಗ್ಗೆ ಅಧಿಕಾರಿಗಳು ಕೂಲಂಕುಶವಾಗಿ ಪರಿಶೀಲಿಸಿ ವರದಿ ನೀಡಲು ಎಲ್ಲಾ ತಹಶೀಲ್ದಾರರಿಗೆ ಸೂಚನೆ ನೀಡಿದರು.

ಎಲ್ಲಾ ತಹಶೀಲ್ದಾರರು ಪ್ರತಿ ಮತಗಟ್ಟೆಗಳನ್ನು ಪರಿಶೀಲಿಸಿ ಮುಕ್ತ, ನ್ಯಾಯ ಸಮ್ಮತ, ಶಾಂತಿಯುತ ಚುನಾವಣೆಗೆ ಎಲ್ಲಾ ಸಿದ್ಧತೆಗಳ ಕುರಿತಂತೆ ವರದಿ ನೀಡಲು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಉಪ ವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಜೆ. ಬಡಾವಣೆ ಪೊಲೀಸ್ ಕ್ವಾಟ್ರಸ್, ವಿನೋಬನಗರ 1ನೇ ಮುಖ್ಯ ರಸ್ತೆ, ಜೊಳ್ಳಿ ಕಾಂಪೌಂಡ್, ರಾಮಕೃಷ್ಣ ಹಾಸ್ಪಿಟಲ್, ಬಿಎಸ್‌ಎನ್‌ಎಲ್ ಕ್ವಾಟ್ರಸ್ ಹಾಗೂ ಸುತ್ತ ಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಕಡರನಾಯಕನಹಳ್ಳಿ ಗ್ರಾ.ಪಂ.ಗೆ ನಾಳೆ ಜಿ.ಪಂ. ಸಿಇಒ ಭೇಟಿ : ದೂರು ಸ್ವೀಕಾರ

ದಾವಣಗೆರೆ, ಡಿ.11- ಪ್ರತಿ ತಿಂಗಳ ಎರಡನೇ ಬುಧವಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಅವರು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಶಾಸನಬದ್ದ ಯೋಜನೆ, ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ದೂರು ಮನವಿಗಳನ್ನು ಸ್ವೀಕರಿಸಿ ಸಮಸ್ಯೆಗಳನ್ನು ಇತ್ಯರ್ಥಪಡಿಸಲಿದ್ದಾರೆ.

ನಾಡಿದ್ದು ದಿನಾಂಕ 13 ರ ಬುಧವಾರ ಹರಿಹರ ತಾಲ್ಲೂಕಿನ ಕಡರನಾಯಕನಹಳ್ಳಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ, ಸಾರ್ವಜನಿಕರ ದೂರು-ಮನವಿಗಳನ್ನು ಸ್ವೀಕರಿಸಿ ಸಾಧ್ಯವಾದಷ್ಟು ಸ್ಥಳದಲ್ಲೇ ಇತ್ಯರ್ಥಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.







